

# ಯಕ್ಷಪ್ರಶ್ನೆ - 30

ಅರವಿಂದ ದೇಶಪಾಂಡೆ, ಬೆಳಗಾಂ

**ಪ್ರ. 69 : ಮಿತ್ರ ಪರಿವಾರ ಹೆಚ್ಚಾಗಿರುವವನಿಗೆ ಆಗುವ ಲಾಭವೇನು ?**

**ಉತ್ತರ : ಮಿತ್ರ ಪರಿವಾರ ಹೆಚ್ಚಾಗಿ ಇರುವವನಿಗೆ ಸುಖ ಹೆಚ್ಚು.**

ಪ್ರಪಂಚದಲ್ಲಿ ಗೃಹಸ್ಥನು ಅನೇಕ ತರದ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಲಗ್ನ ಕಾರ್ಯದಂತಹ ಸಣ್ಣಪುಟ್ಟ ಕಾರ್ಯಸಮಾರಂಭ, ಕೆಲವು ಧಾರ್ಮಿಕ ಉತ್ಸವ - ಮಹೋತ್ಸವ, ಆಪ್ತೇಷ್ಟರ ಸಲುವಾಗಿಯೂ ಕೂಡ ಎಷ್ಟೋ ಸಲ ಹಬ್ಬ ಹುಣ್ಣಿಮೆಗಳನ್ನು ಮಾಡಬೇಕಾಗುತ್ತದೆ. ಇವೆಲ್ಲ ಮಾಡಬೇಕೆಂದರೆ ಉತ್ತಮವಾಗಿ ಯಶಸ್ವಿಯಾಗಿ ಮಾಡಬೇಕಾದರೆ ಹಣಬೇಕು. ಆದರೆ ಇಂಥ ಕಾರ್ಯಗಳು ಕೇವಲ ದುಡ್ಡಿನಿಂದಾಗದು. ಇತ್ತೀಚೆಗಂತೂ ಇಂಥ ಕಾರ್ಯಗಳನ್ನು ಮಕ್ತೆ ದಾರಿ ಪದ್ಧತಿಯ ಮೇಲೆ ಕೊಟ್ಟು ಮುಗಿಸುವ ಪರಿಸ್ಥಿತಿ ಪ್ರಾರಂಭವಾಗಿದೆ. ಆದರೆ ಅದರಲ್ಲಿ ಸಂತೋಷ ಸಮಾಧಾನ ಲಭಿಸುವುದಿಲ್ಲ. ಅಷ್ಟೇ ಅಲ್ಲ, ಅದಕ್ಕೆ ಅಧಿಕ ಹಣ ಖರ್ಚು ಆಗಿಯೂ ಎಷ್ಟೇ ಅ ವ್ಯವಸ್ಥೆ ಆದರೂನೂ 'ಆದದ್ದೇ ಒಳಿತು' ಎಂದು ಸಮಾಧಾನ ಮಾಡಿಕೊಳ್ಳಬೇಕಾಗುತ್ತದೆ. ಅದೇ ಒಂದು ವೇಳೆ ನಮ್ಮ ಬೆಂಬಲಕ್ಕೆ ಮನುಷ್ಯ ಬಲವಿದ್ದರೆ, ಒಳ್ಳೇ ಮಿತ್ರ ಪರಿವಾರವಿದ್ದರೆ ಯಾವುದೇ ಕಾರ್ಯ ಮಾಡಲಿಕ್ಕೂ ಎಷ್ಟೂ ತೊಂದರೆಯಾಗುವುದಿಲ್ಲ. ಸಂಸಾರದಲ್ಲಿಯಂತೂ ಜನಬಲವೇ ನಿಜವಾದ ಬಲ. ಅದು ಲಭಿಸಿದವನ ಜೀವನ ಸುಖಮಯವಾಗುತ್ತದೆ. ಹಾಗೆ ಜನ ಬಲ ಲಭಿಸಬೇಕಾದರೆ ಆ ಗೃಹಸ್ಥನ ಸ್ವಭಾವ ಒಳ್ಳೆಯದೂ, ಸರಳವಾದದ್ದೂ, ಯಾರಿಗೂ ತೊಂದರೆಯಾಗದಂಥದು, ಸೌಜನ್ಯಯುಕ್ತ, ಕ್ಷಮಾಶೀಲ, ಪ್ರೀತಿಯುಕ್ತವಿರಬೇಕು. ಬಿಚ್ಚು ಮನಸ್ಸಿನವನಾಗಿರಬೇಕು. ವೃತ್ತಿ ಉದಾರವಾಗಿರಬೇಕು. ಮಾತು ಮಧುರವಾಗಿರಬೇಕು. ಸ್ವಲ್ಪ ಪ್ರಯತ್ನದಿಂದ ಈ ಗುಣಗಳನ್ನು ಪಡೆಯಬಹುದು. ಕೊಂಚ ಕಷ್ಟಪಡಬೇಕಾದರೂನೂ ಅದರ ಫಲ ಮಾತ್ರ ಉತ್ತಮವಾಗಿರುತ್ತದೆ. ಬಿತ್ತಿದರೇನೇ ಬೆಳೆಯಬಹುದು ಎಂಬ ಜಾಣ್ಮೆಯ ನುಡಿಯನ್ನು ನೆನಪಿನಲ್ಲಿಟ್ಟು ಒಳ್ಳೇ ವರ್ತನೆಯಿಂದ ನಡೆದು ಸಜ್ಜನರ ಸಂಗವನ್ನು ಪಡೆಯಲೆತ್ನಿಸಬೇಕು.

**ಪ್ರ. 70 : ಧರ್ಮದಲ್ಲಿ ಆಸಕ್ತನಾದವನಿಗೆ ಲಭಿಸುವುದೇನು?**

**ಉತ್ತರ : ಧರ್ಮದಲ್ಲಿ ಆಸಕ್ತನಾದವನಿಗೆ ಸದ್ಗತಿ ಲಭಿಸುವುದು.**

**'ಅನಂತ ಪದ್ಮ', ನಂ. 531, 7ನೇ ಅಡ್ಡರಸ್ತೆ, ಭಾಗ್ಯನಗರ ಬೆಳಗಾಂ - 6**



ಧರ್ಮದಲ್ಲಿ ಆಸಕ್ತನಾದವನೆಂದರೆ ಧರ್ಮರತನೆಂದೂ ಅರ್ಥ. ಧರ್ಮರತ ಈ ಶಬ್ದ ತುಂಬಾ ಮಹತ್ವದ್ದಾಗಿದೆ. 'ರತ' ಎಂದರೆ ಆನಂದಿಸುವವ, ಪ್ರೀತಿಯಿಂದ, ಆಸ್ಥೆಯಿಂದ, ಬೇಸರಿಯದೇ ಸ್ವೀಕರಿಸುವವ ಎಂದರ್ಥ. ಧರ್ಮದ ವಿಷಯದಲ್ಲಿ ಈ ರೀತಿ ಆಸ್ಥೆ ಇರುವವನಿಗೆ ಸದ್ಗತಿ ಲಭಿಸುತ್ತದೆ. ಅವನ ಉದ್ಧಾರವಾಗುವುದರಲ್ಲಿ ಸಂಶಯವೇ ಇಲ್ಲ. ನಿಜವಾದ ತೊಂದರೆ ಇಂಥ ಆಸ್ಥೆಯದು. ನಿರಾಸಕ್ತಿ ಅಥವಾ ಅನಾಸ್ಥೆಯಿಂದ ಇಲ್ಲವೇ ಒತ್ತಾಯದಿಂದ ಧಾರ್ಮಿಕ ಕಾರ್ಯಗಳನ್ನು ಮಾಡಿದರೆ ಅದು ಕೇವಲ ಕಾಟಾಚಾರದಿಂದ ಮಾಡಿದಂತಾದರೂ ಆದೀತು. ಅದನ್ನು ಮಾಡಲಾರದ ಮನಸ್ಸಿನಿಂದಾದರೂ ಮಾಡಿದಂತಾದೀತು. ಹಾಗೆ ಮಾಡಿದ ಕಾರ್ಯಗಳು ಫಲದಾಯಿಗಳಾಗುವುದಿಲ್ಲ.

ಧರ್ಮ ಕಾರ್ಯ ಮಾಡುವಾಗ ಅಸ್ಥೆ ಮತ್ತು ಆಸಕ್ತಿ ಪೂರ್ಣವಾಗಿದ್ದರೆ ಅದು ಶ್ರಮವೆನಿಸುವದಿಲ್ಲವಷ್ಟೇ ಅಲ್ಲ ಉತ್ಸಾಹದಾಯಕವೂ ಉಲ್ಲಾಸದಾಯಕವೂ ಆಗಿ ಪರಿಣಮಿಸುವುದು.

**ಪ್ರ. 70 : ಯಾರು ನಿಜವಾಗಿಯೂ ಸುಖಿಗಳು ?**

**ಉತ್ತರ : ಯಾರ ಮನೆಯಲ್ಲಿ 6-7ದಿನಕ್ಕೊಮ್ಮೆ ರೊಟ್ಟೀ ಜೊತೆಗೆ ಪಲ್ಲ್ಯೆ ತಿನ್ನುವರೋ, ಯಾರು ಸಾಲದ ಭಾರವನ್ನು ಹೊತ್ತಿಲ್ಲವೋ, ಯಾರಿಗೆ ಪ್ರವಾಸ ಮಾಡುವ ಅವಶ್ಯಕತೆಯೇ ಇಲ್ಲವೋ ಅವರು ನಿಜವಾಗಿಯೂ ಸುಖಿಗಳು.**

ಎಂಥಹ ಸ್ವಭಾವದಿಂದ ಇತರರಿಗೆ ಆನಂದ ಲಭಿಸುವುದೋ ಅಂತಹ ಪ್ರವೃತ್ತಿ ಈಗ ಕಾಲ ಬಾಹ್ಯ, ಗೊಡ್ಡು ಎನಿಸಿದೆ. ಈಗ ಬಹುತೇಕ ಜನರು ಚಾರ್ವಾಕ ಮತದ ಅನುಕರಣೆ ಮಾಡುವವರೋ.

**'ಋಣಂ ಕೃತ್ವಾ ಘೃತಂ ಪಿಬೇತ್'** ಅಂದರೆ 'ಸಾಲ ಮಾಡಿಯಾದರೂ ಸಾಲೋಗರವನ್ನು ಉಣ್ಣಬೇಕೆಂಬ' ಮತದವರು.

ಮಿತ್ರ ಪರಿವಾರದರೊಂದಿಗೆ ನಿಸರ್ಗರಮ್ಯ ಸ್ಥಳಗಳಿಗೆ ಮೇಲಿಂದ ಮೇಲೆ ಪ್ರವಾಸ ಹೋಗುವ ಪ್ರಥೆಯೂ ಹೆಚ್ಚಾಗುತ್ತಿದೆ.

ತಿನ್ನುಣ್ಣುವುದರಲ್ಲಿ ದಿನಾಲು ಹೊಸ ಹೊಸ ರುಚಿರುಚಿಕರ ವಸ್ತುಗಳು ಇರಬೇಕೆಂದು ಎಲ್ಲರಿಗೂ ಅನಿಸುವುದು ಸಹಜ. ಈ ಪರಿಸ್ಥಿತಿಯಲ್ಲಿ ಯುಧಿಷ್ಠಿರ ಕೊಟ್ಟ ಉತ್ತರ ಆಧುನಿಕ ವಿಚಾರವಂತರಿಗೆ ಅಷ್ಟೊಂದು ಒಪ್ಪಿಗೆಯಾಗಲಿಕ್ಕಿಲ್ಲ.

ನಿಜವಾಗಿಯೂ ಸುಖೀ - ಆನಂದಿತನೆಂದು ಯುಧಿಷ್ಠಿರ ಹೇಳುವ ಮನುಷ್ಯ, ಅತ್ಯಂತ ಸಾದಾ, ಸರಳ, ಸಜ್ಜನ, ಸೌಜನ್ಯಶೀಲ, ಅತ್ಯಂತ ಸಂಕೋಚಸ್ವಭಾವದವ ಮತ್ತು ಶಾಂತಿಯಲ್ಲಿಯೇ ಸಮಾಧಾನಪಟ್ಟು ಅಲ್ಪ ಸಂತುಷ್ಟಿಯಾಗಿರುವನು. ಅಂಥವನನ್ನು ದೃಷ್ಟಿಯಲ್ಲಿಟ್ಟುಕೊಂಡು ಯುಧಿಷ್ಠಿರ ಹೇಳುತ್ತಾನೆ, "ಯಕ್ಷನೇ, ಯಾರ ತಲೆಯ ಮೇಲೆ ಕಿಂಚಿತ್ತು ಕೂಡ ಸಾಲದ ಭಾರವಿಲ್ಲವೋ, ಅದೇ ಕಾರಣದಿಂದ ಋಣ ಮುಕ್ತಿಯ ಸಲುವಾಗಿ ಯಾರಿಗೆ ಧೃಡಪಡಿಸುವ ಇಲ್ಲವೇ ತಡಪಡಿಸುವ ಅವಶ್ಯಕತೆ ಇಲ್ಲವೋ, ಅದರಂತೆಯೇ [illegible]

ಪ್ರವಾಸ ಮಾಡಲೇಬೇಕಾದ ಪ್ರಸಂಗವಿಲ್ಲವೋ ಅಂದರೆ ಯಾರಿಗೆ ತನ್ನ ವ್ಯವಸಾಯ - ಉದ್ಯೋಗ ಕಾರಣದಿಂದಾಗಿ ಅನಾವಶ್ಯಕವಾಗಿ ಓಡಿಯಾಡುವ ಪ್ರಸಂಗ ಬಾರದೇ, ಸ್ವತಂತ್ರವಾಗಿ ಅನಾಯಾಸವಾಗಿ ಮಾಡಲು ಸಾಧ್ಯವೋ ಅಂಥವನು ಸದಾಕಾಲವೂ ಆನಂದಿತನೆಂದು ತಿಳಿ" ಏಕೆಂದರೆ ಅವನಿಗೆ ಆಸೆ- ಆಮಿಷಗಳು ಮಿತವಾಗಿರುವವು. ಅಂಥವರ ಮನೆಯಲ್ಲಿ ರೊಟ್ಟಿಯ ಜೊತೆಗೆ ತಿನ್ನಲು ಪಲ್ಯೆ ಕಾಯಿ 6-7 ದಿನಕ್ಕೊಮ್ಮೆ ಸಿಕ್ಕರೂ ಕೂಡ ಏನೂ ವ್ಯತ್ಯಾಸವಾಗುವುದಿಲ್ಲ. ಅಂದರೆ ಈ ವಿಷಯ ಇಂದಿನ ವಿಚಾರವಂತರಿಗೆ ಒಪ್ಪಿಗೆಯಾಗುವುದಿಲ್ಲ.

ಸಾಲ ಮಾಡಿಯಾದರೂ, ಸಡಗರದಲ್ಲಿ ಕಿಂಚಿತ್ತೂ ಕಡಿಮೆಯಾಗಬಾರದು. ಅದರ ಪರಿಣಾಮವಾಗಿ ಸಂಕಟ ಬಂದೊದಗಿದರೂ ಪರಿವೆ ಇಲ್ಲವೆಂಬ ಆದರ್ಶ ಸಂಪ್ರದಾಯವನ್ನು ನಮ್ಮ ರಾಜ್ಯ ಕರ್ತೃಗಳೇ ನಮ್ಮ ಮುಂದಿಟ್ಟಿದ್ದಾರೆ.

**ಆರಿಸಿ ಬಂದ ಪ್ರತಿನಿಧಿಗಳ ಮಾನಸಿಕ ಮಾನ ಧನ ಒಂದೇ ಸವನೇ ಏರುತ್ತಲೇ ಇದೆ. ಅವರಿಗೆ ಸಿಕ್ಕುವ ಭತ್ತೆ ಮತ್ತು ಸಂಸ್ಥಾನಿಕರಿಗಿಂತ ಎರಡು ಹೆಜ್ಜೆ ಮುಂದೇನೇ. ಯಾವುದೇ ರಾಜಕಾರಣಿಯ ಎಂಥದೇ ಬೇನೆಯು ನಮ್ಮ ದೇಶದಲ್ಲಿ ಲಭಿಸುವ ಉಪಾಯಗಳಿಂದ ಗುಣವಾಗುವುದೇ ಇಲ್ಲ. ಅದರ ಉಪಚಾರಕ್ಕೆ ಪರದೇಶಕ್ಕೆ ಹೋಗಲೇಬೇಕು. ಅನೇಕ ಸಲ ವಿಶ್ವಪರ್ಯಟನ ಮಾಡಿ ಬಂದ ಮೇಲೂ, ನಗರ ಪಾಲಿಕೆ ಸದಸ್ಯನಿಂದ ಹಿಡಿದು ಮಂತ್ರಿಗಳವರೆಗೆ ಯಾರಿಗೂನೂ ತಮ್ಮ ಕ್ಷೇತ್ರಗಳಲ್ಲಿ ಮಾಡಬೇಕಾದ ಅಥವಾ ಮಾಡಬಹುದಾದ ಸುಧಾರಣೆಗಳ ಬಗ್ಗೆ ಪ್ರೇರಣೆಯಾಗುವುದಿಲ್ಲ. ಮಂತ್ರಿಗಳಿಗಂತೂ ಅದರ ಅಭ್ಯಾಸದ ಸಲುವಾಗಿ ತಜ್ಞರ ದೊಡ್ಡ ಗುಂಪನ್ನೇ ತಮ್ಮ ಜೊತೆಗೆ ಕರೆದುಕೊಂಡು ಹೋಗಬೇಕಾಗುತ್ತದೆ. ಅಷ್ಟೇ ಅಲ್ಲ, ಮೇಲೆ ರಾಜಕೀಯ ಸಂಪರ್ಕವನ್ನು ಸಾಧಿಸಿ, ಸಮಂಜಸತೆಯನ್ನು ನಿರ್ಮಾಣ ಮಾಡಲಿಕ್ಕೆಂದು ಮತ್ತೆ ಮತ್ತೆ ಪರದೇಶದ ಪ್ರವಾಸ ಕೈಗೊಳ್ಳಲೇಬೇಕಾಗುವುದು ಬೇರೆ. ವಿಶ್ರಾಂತಿಗಾಗಿ ಪರದೇಶದಲ್ಲಿಯ ನಿಸರ್ಗ ರಮ್ಯ ಸ್ಥಳಗಳೇ ಆಗಬೇಕು.**

ಪರದೇಶದ ತುಲನೆಯಲ್ಲಿ ನಮ್ಮ ದೇಶ ತೀರ ಹಿಂದುಳಿದುದು. ನಮ್ಮಲ್ಲಿಯ ಅರ್ಧದಷ್ಟು ಜನಸಂಖ್ಯೆ ದರಿದ್ರ - ರೇಷೆಗಿಂತಲೂ ಕೆಳಗೇ ಇದೆ. ಹೀಗಿದ್ದಾಗ್ಯೂ ನಮ್ಮ ಪ್ರಧಾನ ಮಂತ್ರಿಗಳೊಬ್ಬರು ತಮ್ಮ 5-6 ದಿನದ ಪರದೇಶ ಪ್ರವಾಸಕ್ಕಾಗಿ 15-16 ಕೋಟಿ ರೂಪಾಯಿ ವೆಚ್ಚ ಮಾಡಿದ ಸುದ್ದಿ ಜನಜನಿತವಾಗಿದೆ. ಜನತೆಗಾಗಿ, ಜನತೆಯ ಸಲುವಾಗಿ, ಜನರಿಂದಲೇ ಆರಿಸಿ ಬಂದ ಈ ಪ್ರತಿನಿಧಿಗಳ ಸಂರಕ್ಷಣೆಗೆ ಪ್ರತಿನಿತ್ಯ ಸಾವಿರಾರು ರೂಪಾಯಿ ವೆಚ್ಚವಾಗುತ್ತಿದೆ.

ವಿಕಾಸ ಕಾರ್ಯಗಳನ್ನು ಯೋಜಿಸುವುದು ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನವನ್ನಂತೂ ಮಾಡಲೇಬೇಕು. ಅದಕ್ಕೆಂದು ದೇಶ ವಿದೇಶಗಳಿಂದ ಪ್ರಚಂಡ ಸಾಲವನ್ನು ಮಾಡಬೇಕಾಗುವುದೂ ಅನಿವಾರ್ಯವಾದದ್ದೇ. ನಮ್ಮ ದೇಶ ಇಷ್ಟು ಬೃಹತ್ ಆಗಿದ್ದರೂ, ಎಂಥ ಚಿಕ್ಕ ರಾಷ್ಟ್ರದಿಂದನೂ ಸಾಲಕೇಳಲು ನಮಗೆ ಸಂಕೋಚವೆನಿಸಿಯೇ ಇಲ್ಲ.

ವಿಕಾಸ ಕಾರ್ಯಗಳ ಯೋಜನೆಯಂತೂ ಎಷ್ಟೊಂದು ಕುಶಲತೆಯಿಂದ ನಡೆಯುವುದೆಂದರೆ ಯೋಜನೆಯ ವೆಚ್ಚದಲ್ಲಿಯ ನೂರಕ್ಕೆ 80ರಿಂದ 90ರಷ್ಟು ಹಣ



ಆಡಳಿತಕ್ಕೇನೇ ಖರ್ಚಾಗುತ್ತದೆ. ಉಳಿದಷ್ಟರಲ್ಲಿ ಭ್ರಷ್ಟಾಚಾರಕ್ಕೆ ಹಣ ಹೋಗಿ ಉಳಿದರೆ ವಿಕಾಸಕಾರ್ಯ ಪ್ರಗತಿ ಕಾಣಬಹುದು. ಅದನ್ನೂ ಕೂಡ ನಾವು ತುಂಬ ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ನಮ್ಮ ದೇಶದ ಜನಸಂಖ್ಯೆ 100ಕೋಟಿಯಷ್ಟಿದೆ. ಮತ್ತು ನಮ್ಮಲ್ಲಿಯ ಪ್ರತಿಯೊಬ್ಬರ ತಲೆಯ ಮೇಲೂ ಹುಟ್ಟಿದಾರಭ್ಯದಿಂದ ಹಲವು ಸಹಸ್ರ ರೂಪಾಯಿಗಳ ಸಾಲದ ಭಾರವಿದ್ದೇ ಇದೆ. ಹೀಗಿರುವಾಗ ಸಾಲ ಮಾಡಬಾರದು, ಇದ್ದುದರಲ್ಲೇ ಸಮಾಧಾನದಿಂದ ತೃಪ್ತಿಯಿಂದ ನಿಭಾಯಿಸಿಕೊಂಡಿರಬೇಕು. ಆನಂದದಿಂದ ಇರಬೇಕೆಂದರೆ ಅಂಥ ಪ್ರೇರಣೆ ಎಲ್ಲಿಂದ ಬರಬೇಕು? ಯಾರದೂ ಎಂಥದೂ ಸಾಲ ನಮ್ಮ ಮೇಲೆ ಬೇಡವೆಂದರೆ ನಾವು ಬದುಕುವುದು ಸಾಧ್ಯವಾದೀತೆ? ರಾಜನಂತೆ ಪ್ರಜೆ ಇರುವುದೇ ನ್ಯಾಯವಲ್ಲವೇ?

**ಎಂದಾದರೊಮ್ಮೆ ಒಬ್ಬ ಅರ್ಥ ಮಂತ್ರಿಗೆ ತನ್ನ ರಾಷ್ಟ್ರ ಮಾಡಿದ ಸಾಲದ ಭಾರದ ಅರಿವು ಕ್ವಚಿತ್ತಾಗಿ ಆದರೆ ಆಗ ಬೇರೆ ಬೇರೆ ಶಾಸಕೀಯ ವಿಭಾಗಗಳಿಗೆ ಸುತ್ತೋಲೆಯನ್ನು ಹೊರಡಿಸಿ, ಎಲ್ಲರೂ ತಮ್ಮ ತಮ್ಮ ವೆಚ್ಚದಲ್ಲಿ ನೂರಕ್ಕೆ 10ರಷ್ಟು ಕಡಿತ ಮಾಡಲು ಸೂಚಿಸುತ್ತಾನೆ. ಆದರೆ ವಿಲಾಸಮಯ ಜೀವನದ ರುಚಿಯುಂಡ ಬುದ್ಧಿವಂತ ಸರಕಾರೀ ಅಧಿಕಾರಿಗಳು ಇಂಥ ಸೂಚನೆಗಳನ್ನು ತಿರಸ್ಕರಿಸುವುದಷ್ಟೇ ಅಲ್ಲ, ಮತ್ತೆ ಮೇಲೆ ಇದ್ದ ವೆಚ್ಚದಲ್ಲೇ ಸರಿಯಾಗಿ ಕೆಲಸ ಮಾಡುವುದು ಎಷ್ಟೊಂದು ಕಠಿಣವಾಗಿದೆಯೆಂಬುದನ್ನೇ ಎತ್ತಿ ತೋರಿಸುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಯುಧಿಷ್ಠಿರನ ಮಾತು ಯಾರಿಗೆ ರುಚಿಸಿಯಾವು? ಯಾರಿಗೆ ಒಪ್ಪಿಗೆಯಾದಾವು? ಹಿಂದೊಮ್ಮೆ ಸಾಲಗಾರನಾಗಿರುವುದೆಂದರೆ ಸಾಯುವುದಕ್ಕಿಂತ ಕೀಳು ಎಂಬ ಭಾವನೆ ಇತ್ತು. ಆ ಸಾಲ ತೀರಿಸಲೆಂದೇ ಪುನಃ ಪುನಃ ಜನ್ಮ ಪಡೆಯಬೇಕಾದೀತೆಂಬ ಭಯ ಕೂಡ ಆವರಿಸುತ್ತಿತ್ತು. ಮಾಡಿದ ಸಾಲ ಮರಳಿ ಕೊಡದಿರುವುದು ಪಾಪಕ್ಕೆ ಸಮಾನವೆಂಬ ಭಾವನೆ ಮನಸ್ಸಿನಲ್ಲಿ ಬೇರೂರಿತ್ತು. ಅದರಿಂದ ಕೊಡತಗೊಳ್ಳುವ ವ್ಯವಹಾರದಲ್ಲಿ ಅಷ್ಟೇ ಅಲ್ಲ, ತಿನ್ನು - ಉಣ್ಣುವುದರಲ್ಲೂ ಮಿತವ್ಯಯವನ್ನೇ ಅಭ್ಯಾಸ ಮಾಡಲಾಗುತ್ತಿತ್ತು. ಸಾಲವೂ ಬೇಡ ಮತ್ತು ಮಿತವ್ಯಯದ ದೃಷ್ಟಿಯಿಂದ ಪ್ರವಾಸವೂ ಬೇಡ ಎಂದು ವಿಚಾರ ಮಾಡಿ ಆನಂದದಿಂದ ಬದುಕಿದ್ದರು.**

ಎಷ್ಟೇ ವಿಚಾರ ಮಾಡಿದರೂನೂ ಪ್ರವಾಸವೆಂದರೆ ತೊಂದರೆ ಕೊಂಚ ಮಟ್ಟಿಗೆ ಆಗಲೇಬೇಕು. ಅದನ್ನು ಸಹಿಸುವುದು ಎಲ್ಲರಿಗೂ ಸಾಧ್ಯವಾದೀತೆಂದು ಹೇಳಲಾಗದು.

ಭೋಜನದಲ್ಲಿ ಹಾಗೆ ನೋಡಿದರೆ ಮೇಲೆ ಬಡಿಸಿಕೊಳ್ಳುವ ವ್ಯಂಜನ ಪದಾರ್ಥಗಳಿರಬೇಕೆಂದರೆ, ವ್ಯಕ್ತಿ ವ್ಯಕಿಗಳ ವಿಚಾರ ಮಾಡಿದರೆ ಅವು ಭೋಗ - ವಿಲಾಸದ ವಸ್ತುಗಳೆಂದೇ ಹೇಳಬೇಕಾದೀತು. ಕಠಿಣ ಪರಿಸ್ಥಿತಿಯಿಂದಾಗಿ, ದಾರಿದ್ರ್ಯದಿಂದಾಗಿ ಯಾವುದೇ ಹಚ್ಚಿಕೊಳ್ಳುವ ವ್ಯಂಜನ ಪದಾರ್ಥಗಳಿಲ್ಲದೇನೇ ಜೋಳ, ಗೋವಿನ ಜೋಳ ಇಲ್ಲವೇ ಸೆಜ್ಜಿಯ ರೊಟ್ಟಿಯನ್ನು ಬರೀ ಬಾಯಿಯಲ್ಲಿಯೇ ಅಗಿದು - ಅಗಿದು ಬಾಯಲ್ಲಿ ಬಿಟ್ಟ ಉಗುಳು ನೀರಿನೊಂದಿಗೇನೇ ರುಚಿ ಎನಿಸಿಕೊಂಡು ತಿನ್ನುವ ಜನರನ್ನು ನಾವು ಕಂಡಿದ್ದೇವೆ. ಅಂಥವರಲ್ಲಿ ವಾರಕ್ಕೊಂದು ಸಲ ಪಲ್ಯ - ಕಾಯಿ ಸಿಕ್ಕುವುದೆಂದರೆ ಹಬ್ಬಕ್ಕೆ ಸಮಾನ. ಇದನ್ನು ಗಮನಿಸಿದರೆ ಯುಧಿಷ್ಠಿರ ಹೇಳಿದ್ದು ಸರಿಯೆಂದು ಮನಗಾಣಬಹುದು. (ಸಶೇಷ)

# ಏಳು ಏನೆಂದು ಹೇಳು - ೨

ಉಡುಪಿ ಅಷ್ಟಾವಧಾನಿ

ಮ ಹಾ ಭಾ ರ ತ ದ ಏ ಳು ಬೀ ಳು ಗ ಳು

## ೧೯೨ ತುಂಬ ತೊಂದರೆಯಿಂದ ದೂರಾಗುವವರು

ನಿತ್ಯವೂ ಮದ್ಯವನ್ನು, ಮಾದಕವಸ್ತುವನ್ನು, ಮಾಂಸವನ್ನು, ಭೋಗದ ಹೆಣ್ಣನ್ನು ಬಿಟ್ಟವರು, ಜೀವನಕ್ಕಾಗಿ ಉಣ್ಣುವವರು, ಸತ್ಸಂತಾನಕ್ಕಾಗಿ ಭೋಗಿಸುವವರು ಮತ್ತು ಸತ್ಯಕ್ಕಾಗಿ ನುಡಿವವರು.

**ಮಧು ಮಾಂಸಂ ಸ್ತ್ರೀಯೋ ನಿತ್ಯಂ ವರ್ಜಯಂತೀಹ ಮಾನವಾಃ ।**

**ಜನ್ಮಪ್ರಭೃತಿ ಮದ್ಯಂ ಚ ದುರ್ಗಾಣ್ಯತಿತರಂತಿ ತೇ ॥**

**ಯಾತ್ರಾರ್ಥಂ ಭೋಜನಂ ಯೇಷಾಂ ಸಂತಾನಾರ್ಥಂ ಚ ಮೈಥುನಮ್ ।**

**ವಾಕ್ ಸತ್ಯವಚನಾರ್ಥಂ ಚ ದುರ್ಗಾಣ್ಯತಿತರಂತಿ ತೇ ॥**

## ೧೯೩ ವಿಷಮಪರಿಸ್ಥಿತಿಯಿಂದ ಬದುಕುವವರು

ಸನ್ಮಾನ ಬಯಸದವರು, ಪರರನ್ನು ಗೌರವಿಸುವವರು, ಸನ್ಮಾನಿತರನ್ನು ನಮಿಸುವವರು, ಕೋಪ ಮಾಡದವರು, ಕೋಪಿಗಳನ್ನು ಶಾಂತಗೊಳಿಸುವವರು, ಸೇವಕರಿಗೂ ಸಿಟ್ಟಾಗದವರು ಮತ್ತು ಶುದ್ಧ ಮನಸ್ಸಿನಿಂದ ಕಾಲಕಾಲಕ್ಕೆ ಶ್ರಾದ್ಧಗಳನ್ನು ಮಾಡುವವರು.

**ಯೇನ ಮಾನಿತ್ವಮಿಚ್ಛಂತಿ ಮಾನಯಂತಿ ಚ ಯೇ ಪರಾನ್ ।**

**ಮಾನ್ಯಮಾನಾನ್ನಮಸ್ಯಂತಿ ದುರ್ಗಾಣ್ಯತಿತರಂತಿ ತೇ ॥**

**ಯೇ ಚ ಶ್ರಾದ್ಧಾನಿ ಕುರ್ವಂತಿ ತಿಥ್ಯಾಂತಿಥ್ಯಾಂ ಪ್ರಜಾರ್ಥಿನಃ ।**

**ಸುವಿಶುದ್ಧೇನ ಮನಸಾ ದುರ್ಗಾಣ್ಯತಿತರಂತಿ ತೇ ॥**

**ಯೇ ಕ್ರೋಧಂ ಸಂನಿಯಚ್ಛಂತಿ ಕ್ರುದ್ಧಾನ್ ಸಂಶಮಯಂತಿ ಚ ।**

**ನಚ ರುಷ್ಯಂತಿ ಭೃತ್ಯಾನಾಂ ದುರ್ಗಾಣ್ಯತಿತರಂತಿ ತೇ ॥**

## ೧೯೪ ಅತಿ ಸಂಕಟವನ್ನು ದಾಟುವವರು

ಸ್ವಸ್ವ ಆಶ್ರಮ ಧರ್ಮಗಳನ್ನು ನಡೆಸುವವರು, ಸಂಯಮಿಗಳು, ಡಂಭಾಚಾರರಹಿತರು, ಪ್ರಾಮಾಣಿಕವೃತ್ತಿಪರರು, ವಿಷಯ ಸುಖವನ್ನು ನಿಗ್ರಹಿಸಿದವರು, ಲೋಭ ಇಲ್ಲದವರು ಮತ್ತು ವಿಷಯಗಳಿಂದ ಸೋಲದವರು.

‘ಶ್ರೀಭಾಗವತಮ್’, ಮ. ನಂ. 1-146, ಮುಚ್ಲುಕೋಡು, ಉಡುಪಿ



**ಆಶ್ರಮೇಷು ಯಥೋಕ್ತೇಷು ಯಥೋಕ್ತಂ ಯೇ ದ್ವಿಜಾತಯಃ ।**

**ವರ್ತಂತೇ ಸಂಯತಾತ್ಮನೋ ದುರ್ಗಾಣ್ಯತಿತರಂತಿ ತೇ ॥**

**ಯೇ ಡಂಭಾನ್ನಾಚರಂತಿ ಸ್ಮ ಯೇಷಾಂ ವೃತ್ತಿಶ್ಚ ಸಂಯತಾ ।**

**ವಿಷಯಾಂಶ್ಚ ನಿಗೃಹ್ಣಂತಿ ದುರ್ಗಾಣ್ಯತಿತರಂತಿ ತೇ ॥**

**ಯೇ ನ ಲೋಭಾನ್ನಯಂತ್ಯರ್ಥಾನ್ ರಾಜಾನೋ ರಜಸಾನ್ವಿತಾಃ ।**

**ವಿಷಯಾನ್ ಪರಿರಕ್ಷಂತಿ ದುರ್ಗಾಣ್ಯತಿತರಂತಿ ತೇ ॥**

## ೧೯೫ ದೊಡ್ಡವಿಘ್ನಗಳನ್ನು ಮೆಟ್ಟಿದವರು

**ಪ್ರತ್ಯಾಹುರ್ನೋಚ್ಯಮಾನಾ ಯೇ ನ ಹಿಂಸಂತಿ ಚ ಹಿಂಸಿತಾಃ ।**

**ಪ್ರಯಚ್ಛಂತಿ ನ ಯಾಚಂತೇ ದುರ್ಗಾಣ್ಯತಿತರಂತಿ ತೇ ॥**

**ಸರ್ವಾನ್ ದೇವಾನ್ನಮಸ್ಯಂತಿ ಸರ್ವಧರ್ಮಾಂಶ್ಚ ಶೃಣ್ವತೇ ।**

**ಯೇ ಶ್ರದ್ದಧಾನಾಃ ಶಾಂತಾಶ್ಚ ದುರ್ಗಾಣ್ಯತಿತರಂತಿ ತೇ ॥**

ಬೈದರೂ ಬೈಯದವರು, ಹೊಡೆದರೂ ಹೊಡೆಯದವರು, ಕೊಟ್ಟರೂ ಕೇಳದವರು, ಎಲ್ಲ ದೇವತೆಗಳ ಆರಾಧಕರು, ಧರ್ಮಸರ್ವಸ್ವವನ್ನು ಕೇಳಿದವರು, ಶ್ರಾದ್ಧಾಳುಗಳು ಮತ್ತು ಶಾಂತರು.

## ೧೯೬ ಅನೇಕ ಅಡ್ಡಿಗಳಿಂದ ಆಚೆ ನಿಂತವರು

ನಿತ್ಯ ಅತಿಥಿಸತ್ಕಾರ ನಡೆಸುವವರು, ನಿತ್ಯ ಅಸೂಯೆಪಡದವರು, ನಿತ್ಯ ಒಳ್ಳೆಯದನ್ನು ಓದುವವರು, ವಿವಾಹಿತ ಸ್ವಪತ್ನಿಯಲ್ಲಿ ಮಾತ್ರ ಸುಖಪಡೆಯುವವರು, ನಿತ್ಯಾಗ್ನಿ ಹೋತ್ರಗಳು, ಪ್ರಾಣಾಪಾಯದ ಸಂದರ್ಭ ಬಂದರೂ ಸುಳ್ಳು ಹೇಳದವರು ಮತ್ತು ಎಲ್ಲರಿಗೂ ಆದರ್ಶರಾದವರು.

**ವಾಸಯಂತ್ಯತಿಥೀನ್ನಿತ್ಯಂ ನಿತ್ಯಂ ಯೇ ಚಾನಸೂಯಕಾಃ ।**

**ನಿತ್ಯಂ ಸ್ವಾಧ್ಯಾಯಶೀಲಾಶ್ಚ ದುರ್ಗಾಣ್ಯತಿತರಂತಿ ತೇ ॥**

**ಸ್ವೇಷು ದಾರೇಷು ವರ್ತಂತೇ ನ್ಯಾಯಲಬ್ಧೇಷ್ವೃತಾವೃತೌ ।**

**ಅಗ್ನಿಹೋತ್ರಪರಾಃ ಸಂತೋ ದುರ್ಗಾಣ್ಯತಿತರಂತಿ ತೇ ॥**

**ಯೇ ವದಂತೀಹ ಸತ್ಯಾನಿ ಪ್ರಾಣತ್ಯಾಗೇಽಪ್ಯುಪಸ್ಥಿತೇ ।**

**ಪ್ರಮಾಣಭೂತಾ ಭೂತಾನಾಂ ದುರ್ಗಾಣ್ಯತಿತರಂತಿ ತೇ ॥**

## ೧೯೭ ಹಲವು ಆತಂಕಗಳಿಂದ ಸರಿದವರು

ಹೆತ್ತವರ ಸೇವಕರು, ಧರ್ಮ ತಿಳಿದವರು, ಹಗಲು ನಿದ್ದೆ ಮಾಡದವರು, ತ್ರಿಕರಣಪೂರ್ವಕವಾಗಿ ಪಾಪ ಮಾಡದವರು, ಪ್ರಾಣಿ ದಯೆವುಳ್ಳವರು, ಮರಣ ಭಯ ತೊರೆದು ಯುದ್ಧದಲ್ಲಿ ಬೀರ ತೋರುವವರು ಮತ್ತು ಧರ್ಮದ ನೆಲೆಯಲ್ಲಿ ಗೆಲುವನ್ನು ಬಯಸುವವರು.

## ೧೯೮ ಅನಾಹುತಗಳಿಂದ ಉಳಿಯುವರು

ಯಾರೂ ಬಯ್ಯದ ಕೆಲಸ ನಡೆಸುವವರು, ಸುಳ್ಳಿಲ್ಲದ ಮಾತನ್ನು ಆಡುವವರು, ಒಳಿತಿಗಾಗಿ ಸಂಪತ್ತುಗಳಿಸಿದವರು, ಬಾಲಬ್ರಹ್ಮಚಾರಿಗಳಾಗಿದ್ದಾಗ ತಪಗೈದವರು, ಶಾಸ್ತ್ರವಿದ್ಯೆ - ವೇದಗಳ ಅಭ್ಯಾಸ ನಡೆಸಿದವರು, ಇತರರ ಸಂಪತ್ತಿಗೆ ಅಳದವರು ಮತ್ತು ಜನಸಾಮಾನ್ಯರ ಅನ್ನಕ್ಕೆ ಬಾಯಿ ಬಿಡದವರು.

**ಕರ್ಮಾಣ್ಯಕುತ್ಸನಾರ್ಥಾನಿ ಯೇಷಾಂ ವಾಚಶ್ಚ ಸೂನೃತಾಃ ।**
**ಯೇಷಾಮರ್ಥಾಶ್ಚ ಸಾಧ್ವರ್ಥಾ ದುರ್ಗಾಣ್ಯತಿತರಂತಿ ತೇ ॥**
**ಯೇ ತಪಶ್ಚ ತಪಸ್ಯಂತಿ ಕೌಮಾರ ಬ್ರಹ್ಮಚಾರಿಣಃ ।**
**ವಿದ್ಯಾವೇದವ್ರತಸ್ನಾನಾತ್ ದುರ್ಗಾಣ್ಯತಿತರಂತಿ ತೇ ॥**
**ಪರಕ್ರಿಯಾ ನ ತಪ್ಯಂತಿ ಯೇ ಸಂತಃ ಪುರುಷರ್ಷಭಾಃ ।**
**ಗ್ರಾಮ್ಯಾದನ್ನಾನ್ನಿವೃತ್ತಾಶ್ಚ ದುರ್ಗಾಣ್ಯತಿತರಂತಿ ತೇ ॥**

## ೧೯೯ ದುಃಖದುಮ್ಮಾನಗಳಿಂದ ಬದಿಗೆ ಹೋದವರು -

ಹೆದರಿಸದವರು, ಹೆದರದವರು, ತನ್ನಂತೆ ಪರರನ್ನು ಕಂಡವರು, ರಜೋಗುಣ ಇಲ್ಲದವರು, ತಮೋಗುಣ ರಹಿತರು, ಸತ್ತ್ವಗುಣದವರು ಮತ್ತು ಭಾಗ್ಯಶಾಲಿಗಳು ಅಂದರೆ ಭಗವಂತನನ್ನು ಪಡೆದ ಮಹಾತ್ಮರು.

**ಯೇಷಾಂ ನ ಕಶ್ಚಿತ್ತ್ರಸತಿ ನ ತ್ರಸಂತಿ ಹಿ ಕಸ್ಯಚಿತ್ ।**
**ಯೇಷಾಮಾತ್ಮಸಮೋ ಲೋಕೋ ದುರ್ಗಾಣ್ಯತಿತರಂತಿ ತೇ ॥**
**ಯೇ ಚ ಸಂಶಾಂತರಜಸಃ ಸಂಶಾಂತತಮಸಶ್ಚ ಯೇ ।**
**ಸತ್ತ್ವೇ ಸ್ಥಿತಾ ಮಹಾಭಾಗಾ ದುರ್ಗಾಣ್ಯತಿತರಂತಿ ತೇ ॥**

## ೨೦೦ ಮಹಾಪ್ರಸ್ಥಾನದಲ್ಲಿ ಏಳು -

ಪಾಂಡವರೈವರು ದ್ರೌಪದಿಯ ಜತೆ ದೇಶ ಬಿಟ್ಟು ಉತ್ತರಕ್ಕೆ ಹೊರಟಾಗ ನಾಯಿಯೊಂದು ಸೇರಿ ಏಳಾಯಿತು. ಏಳರ ಗುಂಪಿಗೊಂದು ಬೀಳಿತು -

**ಭ್ರಾತರಃ ಪಂಚ ಕೃಷ್ಣಾ ಚ ಷಷ್ಠೀ ಶ್ವಾ ಚೈವ ಸಪ್ತಮಃ ।**
**ಆತ್ಮನಾ ಸಪ್ತಮೋ ರಾಜಾ ನಿರ್ಯಹತ್ ಗಜ ಸಾಹ್ವಯಾತ್ ॥**

# ಮಧ್ವರು - ತೌಳವರು

**ಎ. ಬಿ. ಕುಂಜಾರ್, ಬೆಂಗಳೂರು**

'ತುಳು' ಒಂದು ಜೀವಂತ ಆಡು ನುಡಿ. ಲಕ್ಷೋಪಲಕ್ಷ ಜನರ ತಾಯ್ನುಡಿ. ಕರಾವಳಿ ಕರ್ನಾಟಕದ ದಕ್ಷಿಣ ಭಾಗದ ವಿಶಿಷ್ಟ ಸಂಸ್ಕೃತಿ ಕೂಡ. ಧರ್ಮ - ಪಂಥ - ಜಾತಿ ಎಲ್ಲೆಗಳನ್ನು ಮೀರಿ ಸಂವಹನ ಮಾಧ್ಯಮವಾಗಿ ತೌಳವ ಮಂಡಲದಲ್ಲಿ ತುಳು ಇನ್ನೂ ಚಾಲನೆಯಲ್ಲಿದೆ.

ತೌಳವ ನುಡಿ ಮತ್ತು ಸಂಸ್ಕೃತಿಗೆ ಒಂದು ಪರಂಪರೆ ಇದೆ. ತೌಳವರ ಅನನ್ಯತೆಯ ಆಧಾರತಳವೇ ಈ ಪರಂಪರೆ. ತುಳುನುಡಿಗೆ ತನ್ನದೇ ಆದ ಛಾಪು ಅಥವಾ ಲಾಕ್ಷಣಿಕ ವಿಶಿಷ್ಟತೆ (Ethos) ಇದೆ. ಜನಾಂಗಕೇಂದ್ರಿತ ಮನೋಧರ್ಮ (Ethnocentrism) ವನ್ನೂ ಅದು ಮೈಗೂಡಿಸಿಕೊಂಡಿದೆ. ಇವೇ ತೌಳವರ ವಿಶಿಷ್ಟ ಗುರುತು ಸಾಧಕಗಳು. ಅವರ ಸಂಸ್ಕೃತಿ ಶ್ರೀಮಂತಿಕೆ ದ್ಯೋತಕಗಳು. ಅನ್ಯ ನುಡಿ ಅಥವಾ ಭಾಷೆಗಳಲ್ಲಿ ಕಂಡುಬರುವಂತೆ ಮಣ್ಣಿನ ವಾಸನೆ ಜನಪದದ ಮುಗ್ಧ ಇಂಪು ಹಾಗೂ ಅನುಭವ ಸಂಪನ್ನತೆಯ ಸೊಂಪು ತುಳು - ನುಡಿಯಲ್ಲೂ ಕಂಡು ಬರುತ್ತವೆ. ಇವನ್ನೆಲ್ಲ ಉಳಿಸಿ ಬೆಳೆಸುತ್ತಿದ್ದರೆ ತೌಳವರ ಯಶೋಗಾಥೆಯ ಪ್ರವಾಹ ಗತಿ ಉಳಿಸಿಕೊಳ್ಳುತ್ತದೆ.

ಆಡು-ನುಡಿಯ ನೆಲೆಯಲ್ಲಿ ತುಳು ಸಾಕಷ್ಟು ಶ್ರೀಮಂತ. ಪ್ರಬುದ್ಧ ಭಾಷೆಯ ಸ್ಥಾನಕ್ಕಾಗಿ ಅದು ಕ್ರಮಿಸಬೇಕಾದ ಧಾವಂತ ಬಲುದೂರ. ಇದಕ್ಕಾಗಿ ತೌಳವರಿಂದಲೇ ಅದಕ್ಕೊದಗಬೇಕು ಕಾರ್ಯತಂತ್ರ. ಈ ದಿಸೆಯಲ್ಲಿ ತುಳು ಸಾಹಿತ್ಯಕ್ಷೇತ್ರವು ಹಸನಾಗಬೇಕು. ವಿವಿಧ ಸಾಹಿತ್ಯ ಪ್ರಕಾರಗಳ ಬಿತ್ತನೆ ನಡೆಯಬೇಕು. ತುಳು ಕೃಷಿ ಹುಲುಸಾಗಿ ಬೆಳೆಯಬೇಕು. ಹೀಗಾಗಲು ತೌಳವರಲ್ಲಿರಬೇಕು. ಅಮಿತ ಉತ್ಸಾಹ, ನಿರವಧಿಕ ಪರಿಶ್ರಮ ಹಾಗೂ ಅದಮ್ಯ ಸಾಹಸ ಪ್ರವೃತ್ತಿ. ಸದ್ಯಕ್ಕಿದು ಕೇವಲ ಒಂದು ಸುಂದರ ಕನಸು ಮಾತ್ರ !

ತಮ್ಮ ನುಡಿಯ ಕುರಿತಂತೆ ತೌಳವರ ಅಭಿಮಾನದ ಬುತ್ತಿ ಬತ್ತುತ್ತಿರುವುದು ಒಂದು ದುರಂತವಾದರೆ ಒಂದು ಬಗೆಯ ಕೀಳರಿಮೆ ತೌಳವ ಹೃದಯಗಳಲ್ಲಿ ಹುದುಗಿರುವುದು ಇನ್ನೊಂದು ದುರದೃಷ್ಟಕರ ಸಂಗತಿ. ಇದುವೇ ತುಳು ಸೊರಗುತ್ತಿರುವುದಕ್ಕೆ ಕಾರಣ. ತುಳು ಅಭಿಮಾನಿ ತೌಳವರ ಕೊರಗಿನ ಹೂರಣ ಕೂಡ.

ಅನೇಕ ತೌಳವರ ಮನದಾಳದಲ್ಲಿ ಗೂಢವಾಗಿರುವ ವಿಚಾರಗಳಿವು : ತುಳು ಮುಗ್ಧ ಗ್ರಾಮೀಣ ನುಡಿ. ಸಂಸ್ಕೃತಿ ಶ್ರೀಮಂತಿಕೆ ಕಾಣಲಾಗದ ಸಂವಹನ ಮಾಧ್ಯಮ. ಸಾಮಾಜಿಕ ನಿಮ್ನ ಸ್ತರದವರಿಗಷ್ಟೇ ಸಂಗತವಾಗಬಲ್ಲ ಭಾಷೆ. ಸ್ತರೌನ್ನತ್ಯ ಪ್ರಾಪ್ತರಿಗದು ಭೂಷಣವಲ್ಲ. ಸಾರ್ವಜನಿಕ ಸ್ಥಳ ಹಾಗೂ ಕಾರ್ಯಾಲಯಗಳಲ್ಲಿ ತುಳು ಸಂಭಾಷಣೆ ಅಸಾಂವಿಧಾನಿಕ. ಗೌರವಾನ್ವಿತ ಪ್ರತಿಷ್ಠಿತರ ಸಂವಹನಕ್ಕದು ಅಶೋಭನ. ಶಿಕ್ಷಣ ಸಂಸ್ಥೆಗಳಲ್ಲಿ ಯಾವುದೇ ನೆಲೆಯ ತುಳು ಬಳಕೆ ಅಪಚಾರವೆಸಗಿದಂತೆ....

ಭಾಷೆ ಎನ್ನುವುದು ಧ್ವನಿ ಹಾಗೂ ಕಂಕೇತ ವ್ಯವಸ್ಥೆ ಅಷ್ಟೆ. ಭಾಷೆಗಳಿರುವುದು ಸಮರ್ಥ ಸುಂದರ ಸಂವಹನಕ್ಕಾಗಿ. ದ್ವೇಷಿಸುವುದಕ್ಕಾಗಿ ಅಥವಾ ನೀಚೊಚ್ಚ ತೀರ್ಮಾನ

No. 126/A, I **ಕ್ರಾಸ್, ಒಂದನೇ ಮಹಡಿ, ಕಾಲಪ್ಪ ಬ್ಲಾಕ್, ಶ್ರೀನಗರ, ಬೆಂಗಳೂರು – 560 050**



ಕೈಗೊಳ್ಳುವುದಕ್ಕಲ್ಲ. ಮಡಿವಂತಿಕೆ ತೋರುವುದಕ್ಕಂತೂ ಅಲ್ಲವೇ ಅಲ್ಲ. ಭಾಷೆಯ ಅಭಿವರ್ಧನೆ ಎಂದರೆ ಅವನ್ನಾಡುವ ಜನರ ಹೃದಯ ಶ್ರೀಮಂತಿಕೆಯ ಅಭಿವರ್ಧನೆಯೇ.

ತೌಳವರ ತುಳು ಅಲರ್ಜಿಗೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಒಂದೆರಡನ್ನು ಪರಕಿಸಿದರೆ ಅವರ ಅಂತರ್ಯ ಸ್ಪಷ್ಟವಾಗಿ ತೆರೆದುಕೊಳ್ಳುತ್ತದೆ. ತೌಳವ ಮಂಡಲದಲ್ಲಿ ತುಳು ತಿಳಿಯದವರ ಸಂಖ್ಯೆ ಬಲು ಕಡಿಮೆ. ಆದರೆ ತಮ್ಮ ವಾಸ್ತವ್ಯ - ಪ್ರದೇಶಕ್ಕಿಂತ ಹೊರ ಹೋದಾಗ ತೌಳವರು ತಮಗರಿವಿಲ್ಲದೆಯೆ ಕನ್ನಡಿಗರಾಗಿಬಿಡುವರು! ತೌಳವ ಮಂಡಲದ ಪೇಟೆ ಪಟ್ಟಣಗಳಲ್ಲಂತೂ ತುಳು ಎಲ್ಲೂ ಕೇಳಿಸದು. ತುಳು ಮೆರೆಯಲು ಪ್ರಯತ್ನಿಸಿದವರಿಗೆ ದಕ್ಕುವುದು ಕನ್ನಡದ ಸುಸ್ವಾಗತವೇ. ಎಲ್ಲ ವ್ಯವಹಾರ ಶತ - ಪ್ರತಿ - ಶತ ಕನ್ನಡದಲ್ಲೆ. ತಮ್ಮ ನೌಕರರಲ್ಲಿ ಸಲೀಸಾಗಿ ತುಳು ಸಂಭಾಷಣೆ ಮಾಡುವ ಅಂಗಡಿ ಮಾಲ್ಹಕರು ಆಗಂತುಕ ಗಿರಾಕಿಗಳಲ್ಲಿ ತಪ್ಪಿಯೂ ತುಳು ಆಡದ ದೃಢ ನಿಲುವು ತೋರುವರು.

ತೌಳವ ಮಂಡಲದಲ್ಲಿ ಎಲ್ಲರ ಮನೆ ಮಾತು ತುಳು ಅಲ್ಲ. ಇತರ ನುಡಿಗಳನ್ನು ಮನೆ ಮಾತಾಗಿ ಬಳಸುವ ಮಂದಿಗೆ ತುಳು ಚೆನ್ನಾಗಿ ತಿಳಿದಿರುತ್ತದೆ. ತುಳು ಸಂಭಾಷಣೆಯಿಂದ ತಮ್ಮ ಜಾತ್ಯೌನ್ನತ್ಯ ಅಥವಾ ಸ್ಥಾನ-ಮಾನ ಅಥವಾ ಪ್ರತಿಷ್ಠೆ ತಿಳಿಯದೆ ಹೋದೀತೆಂಬ ಭಯ ಅನೇಕರನ್ನು ಕಾಡುವಂತಿದೆ.

ಇಂದು ಹೊಸದೊಂದು ಪ್ರವೃತ್ತಿ ಗತಿ ಪಡೆದುಕೊಳ್ಳುತ್ತಿರುವುದು ಗಮನಿಸಬೇಕಾದ ಅಂಶ. ಅನೇಕರು ಕನ್ನಡವನ್ನು ಮನೆಮಾತಾಗಿ ಸ್ವೀಕರಿಸುತ್ತಿರುವ ವಿಶಾದನೀಯ ಪರಿಪಾಟ. ನವ ಕನ್ನಡದ ಈ ಮಂದಿಗೆ ತುಳು ಚೆನ್ನಾಗಿ ತಿಳಿದಿರುತ್ತದೆ. ತುಸು ಅಲರ್ಜಿಯೂ ಜೊತೆಗಿರುತ್ತೆ. ನಿಕಟ ಬಂಧುಗಳಲ್ಲೂ ಅಕ್ಕಪಕ್ಕದವರಲ್ಲೂ ಯಾರಲ್ಲೂ ತುಳು ಸಂಭಾಷಣೆಗೆ ಒಲ್ಲದ ಹೊಸ ಪ್ರವೃತ್ತಿ ಇವರದು. ಸಾಮಾಜಿಕ ಕೆಳಸ್ತರದವರೆಂದು ಇವರೇ ತೀರ್ಮಾನಿಸುವ ಮಂದಿಯಲ್ಲಿ ತುಳು ಸಂಭಾಷಣೆ ಮಾಡುವಲ್ಲಿ ಒಂದು ಬಗೆಯ ಹೆಮ್ಮೆಯ ರೇಖೆಗಳನ್ನು ಈ ಮಂದಿಯಲ್ಲಿ ಗುರುತಿಸಬಹುದು. ಅನನ್ಯತೆ ಸ್ಥಾಪಿಸುವುದು ಈ ಮಂದಿಯ ಆಶಯವಿರಬಹುದೆ? ನವ ಸಾಮಾಜಿಕ ಶ್ರೇಣೀಕರಣದ ಉದ್ದೇಶವೆ? ಅರ್ಥವಾಗದ ಅನರ್ಥ ನಡವಳಿಕೆ ಇದು.

ಆಂಗ್ಲ ಭಾಷೆಯ ಪದಗಳು ಅಗತ್ಯಕ್ಕಿಂತಲೂ ಅಧಿಕವಾಗಿ ಎಲ್ಲ ಭಾಷೆಗಳಲ್ಲೂ ಬಳಕೆಯಾಗುವ ಈ ಕಾಲದಲ್ಲೂ ತುಳು ಪದಗಳನ್ನು ಒಂದಿನಿತೂ ಕನ್ನಡದಲ್ಲಿ ಮಿಶ್ರಗೊಳಿಸುವಲ್ಲಿ ಅನೇಕರು ಹಿಂಜರಿಕೆ ತೋರುವರು. ಒಂದು ಬಗೆಯ ಅಪರಾಧಿ ಪ್ರಜ್ಞೆ ಈ ಅವಜ್ಞೆಗೆ ಕಾರಣವಿರಬಹುದು.

**ಕನ್ನಡದ ಅನೇಕ ಪ್ರಾಚೀನ ಪದಗಳು ತುಳು ನುಡಿಯಲ್ಲಿ ಬಲವಾಗಿ ಬೇರೂರಿ ನಿಂತಿವೆ. ನೂಲು, ಕೈಲು, ಕೈಯ್, ಕೆತ್ತೆ, ಕೂಂಪು, ಗೂಂಟ, ಪಾಂಪು, ತಾಂಟು, ಕುಂಬು, ಕುರುವೆ, ಕುಟ್ಟೆ, ಚಲ್ಲಣ, ತಾರ್ಕಣೆ, ಪರ್ತಿ, ಕುಪ್ಪಿ, ಕುರ್ಕಿಹಲು, ಕುಳ್ ಇತ್ಯಾದಿ ಇನ್ನೂ ಹಲವಾರು. ಇಂದು ಈ ಪದಗಳ ಬದಲಾಗಿ ಚಾಲ್ತಿ ಕನ್ನಡ ಅಥವಾ ಸಂಸ್ಕೃತ ಪದಗಳನ್ನು ಅನೇಕರು ಬಳಸುವುದನ್ನು ಕಾಣಬಹುದು. ಸುಸಂಸ್ಕೃತರೆನಿಸಿಕೊಳ್ಳುವ ಹುನ್ನಾರ ಇದರ ಹಿಂದಣದ ನಿರ್ಧಾರವಿರಬಹುದೇ?**

ಕೆಲವು ಊರ ಹೆಸರು (ಅನ್ವರ್ಥನಾಮ)ಗಳನ್ನು ತೌಳವರು ಕನ್ನಡೀಕರಿಸಿದ್ದುಂಟು. ಪೆರ್ಯಡ್ಕ, ಪೆಜಮಾ(ಪಾ)ಡಿ, ಬೊಳ್ಮಣ್ಣ್, ಬೊಳ್ಳ(ಳ್ಳೆ) ಮೊದಲಾದವುಗಳು ಕ್ರಮವಾಗಿ ಹಿರಿಯಡ್ಕ, ಹೆಜಮಾಡಿ, ಬೆಳ್ಮಣ್, ಬೆಳ್ಳೆ ಎಂದು ಪರಿವರ್ತಿತವಾಗಿ ಚಾಲ್ತಿಗೆ ಬಂದಿವೆ.

ಕನ್ನಡದಲ್ಲಿ ತುಳು ನುಸುಳದಂತೆ ಎಚ್ಚರವಹಿಸಿದ ಪರಿಣಾಮವಿದು.

ತುಳು ಉಪೇಕ್ಷೆ, ಮಡಿವಂತಿಕೆ, ವಿಮುಖತೆ ಇತ್ಯಾದಿಗಳು ಅನ್ಯರಿಗಿಂತ ತುಸು ಅಧಿಕವಾಗಿ ತೌಳವ ಬ್ರಾಹ್ಮಣರಲ್ಲಿ ಕಂಡುಕೊಳ್ಳಬಹುದು. ದೇಶದ ನಾನಾಭಾಗಗಳಲ್ಲಿ ಇವರ ನೆಲೆಗಳೂ ಇವೆ. ಇವರಲ್ಲಿ ಬಹುತೇಕರು ಮಾಧ್ವರು. ತಾವಿರುವ ಪರಿಸರಕ್ಕೆ ಶೀಘ್ರವಾಗಿ ಮತ್ತು ಸಮರ್ಥವಾಗಿ ಹೊಂದಿಕೊಳ್ಳುವ ಚುರುಕುತನವೂ ಈ ಮಂದಿಯ ವೈಶಿಷ್ಟ್ಯ. ಹೀಗಾಗಿ ತೌಳವ ಮಾಧ್ವರ ಹೊಸ ಪೀಳಿಗೆ ಪಕ್ಕಾ ಮಲೆಯಾಳಿಗಳಾಗಿ, ತಮಿಳರಾಗಿ, ತೆಲುಗರಾಗಿ, ಕನ್ನಡಿಗರಾಗಿ ಪರಿವರ್ತಿತವಾಗುತ್ತಿರುವುದು ಅನುಭವ ವೇದ್ಯ. ತೌಳವರಾಗಿ ಉಳಿಯುವವರ ಸಂಖ್ಯೆ ಕ್ಷೀಣಿಸುತ್ತಿರುವುದು ಒಂದು ವಿಪರ್ಯಾಸ.

ಆಚಾರ್ಯ ಮಧ್ವರು ವಿಶ್ವಗುರುಗಳು. ಯಾವುದೇ ಒಂದು ವರ್ಗಕ್ಕೆ ಸೀಮಿತರಾದವರಲ್ಲ. ಆದರೆ ತೌಳವ ಬ್ರಾಹ್ಮಣ ಕುಟುಂಬದಲ್ಲಿ ಅವರ ಜನ್ಮ ತೌಳವ ಮಾಧ್ವರಿಗೆ ಸೌಭಾಗ್ಯದ ವಿಚಾರ. ಆಚಾರ್ಯರ ಮನೆ ಮಾತು ತುಳು. ತುಳು ಉಪೇಕ್ಷೆ ಎಂದರೆ ಮಧ್ವರನ್ನೇ ಉಪೇಕ್ಷಿಸಿದಂತೆ. ಮಧ್ವರ ಜೊತೆಗೆ ತಮ್ಮ ವಿಶೇಷವಾದ ಭಾವನಾತ್ಮಕ ಸಂಬಂಧವನ್ನು ಉಳಿಸಿಕೊಳ್ಳುವುದಕ್ಕಾಗಿ ತೌಳವ ಮಾಧ್ವರು ತುಳು ನುಡಿಯನ್ನು ಉಳಿಸಿ ಬೆಳೆಸಬೇಕು. ಈ ಅಭಿಮಾನವು ದುರಭಿಮಾನವಾಗದ ಎಚ್ಚರವೂ ಅಗತ್ಯ. ಅತೌಳವ ಮಾಧ್ವರಲ್ಲಿ ಅನ್ಯತೆಯನ್ನು ಅಥವಾ ಅಸಹನೆಯನ್ನು ಅಥವಾ ಅಸೂಯೆಯನ್ನು ತೋರುವರೆ ಅದೆಂದೂ ಪೂರಕವಾಗಬಾರದು. ತೌಳವ ಸಂಸ್ಕೃತಿಯನ್ನು ಕಾಪಿಡುವುದಕ್ಕಷ್ಟೆ ಅದು ಪ್ರೇರಕವಾಗಬೇಕು. ತೌಳವ ಕಂಪು ಜೀವಂತವಾಗಿರಲು ಮಾತ್ರ ಸಹಾಯಕವಾಗಬೇಕು.

# ಶ್ರಾವಣದ ಪುತ್ರದಾ ಏಕಾದಶಿ

**ಅಚಿಂಜ್ಯೋ**

ಯುಧಿಷ್ಠಿರನು ಕೇಳಿದ್ದಕ್ಕೆ ಶ್ರೀಕೃಷ್ಣನು ಹೀಗೆ ಹೇಳುತ್ತಾನೆ. ದ್ವಾಪರದ ಆರಂಭಕ್ಕೆ ಮಾಹಿಷ್ಮತೀಪುರದಲ್ಲಿ ಮಹೀಜಿತ ಅರಸನು ತನ್ನ ರಾಜ್ಯವನ್ನಾಳುತ್ತಿದ್ದನು. ಅವನಿಗೆ ಮಕ್ಕಳಿಲ್ಲದ್ದರಿಂದ ಸುಖದ ರಹಿತನಾಗಿ ಕೊರಗುತ್ತಿದ್ದನು. ಒಮ್ಮೆ ಆತನು - ಈ ಜನ್ಮದಲ್ಲಿ ನನ್ನಿಂದ ಯಾವುದೇ ಪಾಪವು ಸಂಭವಿಸಿಲ್ಲ ನನ್ನ ಖಜಾನೆಯಲ್ಲಿ ಅನ್ಯಾಯದ ಧನವಿಲ್ಲ ಬ್ರಾಹ್ಮಣರ ಮತ್ತು ದೇವರ ಹಣವನ್ನು ಕದಿಯಲಿಲ್ಲ. ಪ್ರಜೆಗಳನ್ನು ಮಕ್ಕಳಂತೆ ಪಾಲಿಸಿ ಧರ್ಮದಿಂದ ಪೃಥ್ವಿಯ ಮೇಲೆ ಅಧಿಕಾರ ಚಲಾಯಿಸಿದ್ದೇನೆ. ದುಷ್ಟರಿಗೆ ದಂಡನೆ ವಿಧಿಸಿದ್ದೇನೆ. ಶಿಷ್ಟ ಜನರನ್ನು ಕಾಪಾಡಿದ್ದೇನೆ. ಯಾರಲ್ಲಿಯೂ ದ್ವೇಷವನ್ನು ಕಟ್ಟಿಕೊಳ್ಳಲಿಲ್ಲ. ಆದರೂ ನನಗೆ ಮಗನು ಹುಟ್ಟದೆ ಇರಲು ಕಾರಣವೇನು ತಾವು ಇದನ್ನು ವಿಚಾರ ಮಾಡತಕ್ಕದ್ದು ಎಂದು ಪ್ರಜಾಜನರ ಮುಂದೆ ತನ್ನ ವಿಚಾರವನ್ನಿಟ್ಟನು.

ರಾಜನ ಈ ನುಡಿಯನ್ನು ಕೇಳಿ ಪ್ರಜೆ ಹಾಗೂ ಪುರೋಹಿತರೊಂದಿಗೆ ಬ್ರಾಹ್ಮಣರು ಅವರ ಹಿತದ ವಿಚಾರ ಮಾಡಲು ದಟ್ಟಡವಿಗೆ ಪ್ರವೇಶಿಸಿ ಮುನಿಯ ಆಶ್ರಮವನ್ನು ಹುಡುಕಲು ಹೆಜ್ಜೆ ಹಾಕಿದರು. ಆಗಲೇ ಅವರಿಗೆ ಧರ್ಮಜ್ಞ, ವೇದಪಂಡಿತ, ದೀರ್ಘಾಯು ಇನ್ನು ಮಹಾತ್ಮರಾದ ಲೋಮಶ ಮುನಿಶ್ರೇಷ್ಠರ ಭೇಟಿಯಾಯಿತು.

ಬ್ರಹ್ಮನಂತೆ ತೇಜಸ್ವಿಯಾಗಿರುವ ಲೋಮಶ ಮುನಿಯ ದೇಹದ ಒಂದೊಂದು ರೋಮವು ಒಂದೊಂದು ಕಲ್ಪ ಕಳೆದ ನಂತರ ಉದುರಿ ಬೀಳುತ್ತಿತ್ತು. ಹೀಗಾಗಿ ಲೋಮಶನೆಂಬ ಹೆಸರು ಸಾರ್ಥಕವಾಗಿತ್ತು. ತ್ರಿಕಾಲಜ್ಞಾನಿ ಲೋಮಶನನ್ನು ಕಂಡ ಪ್ರಜಾಜನರು ಆನಂದಿತರಾಗಿ ಅರಸನಿಗೆ ಪುತ್ರ ಪ್ರಾಪ್ತಿಯಾಗದಿರುವಿಕೆ ತಿಳಿಸಿ ಪರಿಹಾರ ಸೂಚಿಸುವಂತೆ ವಿನಂತಿಸಿದರೂ ಅವರ ಮಾತನ್ನು ಕೇಳಿ ಲೋಮಶ ಮಹರ್ಷಿಯು 2 ಗಂಟೆ ಕಾಲ ಧ್ಯಾನ ಮಗ್ನನಾಗಿ ಆಮೇಲೆ ರಾಜನ ಜನ್ಮ ವೃತ್ತಾಂತವನ್ನು ಹೇಳತೊಡಗಿದರು.

"ಹಿಂದಿನ ಜನ್ಮದಲ್ಲಿ ಮಹಿಜಿತ ರಾಜನು ಮಾನವರಿಗೆ ತ್ರಾಸಕೊಡುವ ಧನಹೀನ ವೈಶ್ಯನು ಅವನು ಊರೂರು ತಿರುಗಿ ಪ್ರವಾಸ ಮಾಡಿ ವ್ಯಾಪಾರ ಮಾಡುತ್ತಿದ್ದನು. ಒಮ್ಮೆ ಜ್ಯೇಷ್ಠ ಶುಕ್ಲ ದಶಮಿ ಮಧ್ಯಾಹ್ನಕ್ಕೆ ಸೂರ್ಯನು ನೆತ್ತಿಗೆ ಬಂದಾಗ ಊರಿನ ಗಡಿಯಲ್ಲಿ ಒಂದು ಜಲಾಶಯದತ್ತ ತಲುಪಿದನು. ನೀರಿನಿಂದ ತುಂಬಿದ ಕೊಳ ಕಂಡು ನೀರನ್ನು ಬಯಸಿದನು. ಆಗಲೇ ಅಲ್ಲಿ ಕರು ಸಹಿತ ಒಂದು ಆಕಳು ನೀರಡಿಕೆಯಿಂದ ಬಳಲುತ್ತ ಬಂದಿತು. ಕೊಳದಲ್ಲಿ ಹೋಗಿ ನೀರು ಕುಡಿಯುವಾಗ ವೈಶ್ಯನು ಆಕಳನ್ನು ಓಡಿಸಿ ತಾನು ನೀರನ್ನು ಕುಡಿದನು. ಇದೇ ಪಾಪಕರ್ಮದಿಂದ ಅರಸನು ಪುತ್ರಹೀನನಾಗಿದ್ದಾನೆ. ಯಾವುದೋ ಜನ್ಮದ ಪುಣ್ಯದಿಂದ ಇವನಿಗೆ ಅಕಂಟಕ ರಾಜ್ಯ ಲಭಿಸಿದೆ ಎಂದರು.

**ಅನಂತ ಚಿಂತಾಮಣಿ ಜ್ಯೋತಿಷಿ, ಅಂಚೆ ಬಿಣಗಾ – 581 364, ಕಾರವಾರ, ಉತ್ತರ ಕನ್ನಡ ಜಿಲ್ಲೆ.**



ಪುತ್ರ ಪ್ರಾಪ್ತಿಗಾಗಿ ಪರಿಹಾರ ಕೇಳಿದಾಗ ಲೋಮಶ ಮಹರ್ಷಿಯು - ಪ್ರಜಾಜನರೇ ಶ್ರಾವಣ ಶುಕ್ಲ ಪಕ್ಷದ ಏಕಾದಶಿಯು ಪುತ್ರದಾಏಕಾದಶಿ. ಈ ಪುತ್ರದಾ ಏಕಾದಶಿಯ ವ್ರತವನ್ನು ಅರಸನು ಮಾಡಬೇಕು ಎಂದರು. ಈ ಮಾತುಗಳನ್ನು ಕೇಳಿದ ಪ್ರಜಾಜನರು ಮುನಿಗಳಿಗೆ ವಂದಿಸಿ ನಗರಕ್ಕೆ ಬಂದರು. ವಿಧಿಯುಕ್ತವಾಗಿ ವ್ರತವನ್ನಾಚರಿಸಿ ಜಾಗರಣೆ ಮಾಡಿ ಪುಣ್ಯವನ್ನು ಅರಸನಿಗೆ ಕೊಟ್ಟಾಗ ಮಹಾರಾಣಿಯು ಗರ್ಭವತಿಯಾಗಿ ಬಲಿಷ್ಟ ಪುತ್ರನಿಗೆ ಜನ್ಮ ನೀಡಿದಳು. ಈ ವ್ರತದ ಶ್ರವಣದಿಂದ ಪಾಪಮುಕ್ತನಾಗಿ ಇಹಪರಗಳಲ್ಲಿ ಸುಖ ಪ್ರಾಪ್ತಿಯಾಗುವುದು.

## ಅಜಾ ಏಕಾದಶಿ

ಶ್ರೀ ಕೃಷ್ಣನು ಯುಧಿಷ್ಠಿರನಿಗೆ ಅಜಾಏಕಾದಶಿಯ ಮಹಿಮೆಯನ್ನು ಹೀಗೆ ಹೇಳುತ್ತಾನೆ. ಹೃಷಿಕೇಶ ಭಗವಂತನನ್ನು ಪೂಜಿಸಿ ಅಜಾಏಕಾದಶಿ ವ್ರತ ಮಾಡಿದರೆ ಪಾಪನಾಶವಾಗುವುದು ಹಿಂದಕ್ಕೆ ಸತ್ಯಭಾಷಿ ಹರಿಶ್ಚಂದ್ರನು ಸಮಸ್ತ ಭೂಮಂಡಲದ ಸ್ವಾಮಿಯಾಗಿರುವನು. ಒಮ್ಮೆ ಕರ್ಮಫಲಭೋಗದಿಂದ ರಾಜ್ಯ ಭ್ರಷ್ಟನಾಗಿ ತನ್ನ ಸತಿ ಸುತರನ್ನು ಮಾರಿದನು. ಬಳಿಕ ತನ್ನನ್ನು ಸ್ವತಃ ಮಾರಿಕೊಂಡನು. ಪುಣ್ಯಾತ್ಮನಾದರೂ ಕೂಡ ಚಂಡಾಲನೊಬ್ಬನ ದಾಸನಾಗಿ ವರ್ಷ ಕಳೆದನು. ಒಮ್ಮೆ ರಾಜನಿಗೆ ಚಿಂತೆಯಾಗಿ "ನಾನು ಏನು ಮಾಡಲಿ? ನನ್ನ ಉದ್ಧಾರ ಹೇಗೆ" ಎಂದು ಯೋಚಿಸುತ್ತ ಶೋಕಸಾಗರದಲ್ಲಿ ಮುಳುಗಿದನು.

ರಾಜನ ಚಿಂತೆ ಕಂಡು ಗೌತಮ ಮುನಿಯು ಹರಿಶ್ಚಂದ್ರನಲ್ಲಿ ಬಂದಾಗ ಮುನಿಯ ಕಾಲಿಗೆ ವಂದಿಸಿ ಅಳಲನ್ನು ತೋಡಿಕೊಂಡಾಗ ಗೌತಮನು - ಶ್ರಾವಣ ಕೃಷ್ಣದ ಅಜಾಏಕಾದಶಿ ವ್ರತವನ್ನು ಮಾಡುವುದರಿಂದ ಪಾಪವು ಕಳೆಯುವುದು ನಿನ್ನ ಭಾಗ್ಯದಿಂದ ಇಂದಿನಿಂದ ಏಳನೆಯ ದಿನ ಏಕಾದಶಿ ಆಗಿದ್ದು ಆ ದಿನ ಉಪವಾಸ ಮಾಡಿ ವ್ರತ ಆಚರಿಸಿ ರಾತ್ರೆಗೆ ಜಾಗರಣೆ ಮಾಡಬೇಕು ಎಂದು ಹೇಳಿ ಗೌತಮರು ಅದೃಶ್ಯರಾದರು. ಹರಿಶ್ಚಂದ್ರನು ಅಜಾಏಕಾದಶಿ ವ್ರತಪಾಲನೆ ಮಾಡಿ ದುಃಖರಹಿತನಾದನು. ಅವನಿಗೆ ಸತಿಸುತರು ಲಭಿಸಿದರು. ಆಕಾಶದಿಂದ ದುಂದುಭಿಗಳು ಮೊಳಗಿದವು. ದೇವಲೋಕದಿಂದ ಹೂಮಳೆ ಸುರಿಯಿತು. ಈ ಏಕಾದಶಿಯಿಂದ ಅಕಂಟಕ ರಾಜ್ಯವು ದೊರಕಿ ಕೊನೆಗೆ ಪುರ ಹಾಗೂ ಪರಿಜನರೊಂದಿಗೆ ಸ್ವರ್ಗಲಾಭವಾಯಿತು. ಎಲೈ ಯುಧಿಷ್ಠಿರ ಯಾವನು ಈ ವ್ರತ ಮಾಡುವನೋ ಅವನು ಎಲ್ಲ ಪಾಪಗಳಿಂದ ಬಿಡುಗಡೆ ಹೊಂದಿ ಸ್ವರ್ಗಲಾಭ ಪಡೆಯುವನು. ಈ ವ್ರತದ ಪಠಣ ಶ್ರವಣದಿಂದ ಅಶ್ವಮೇಧದ ಫಲವು ಲಭಿಸುತ್ತದೆ.

### ಸಾಂಸ್ಕೃತಿಕ ರಸಪ್ರಶ್ನೆಯ ಉತ್ತರಗಳು :

**1. ತಾರಣ 2. ಯುಧಿಷ್ಠಿರ 3. ಪಂಜಾಬ್ ರಾಜ್ಯದ 4. ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಸಂಗ್ರಹ 5. ಸಾಂಖ್ಯ 6. ಓಣಂ 7. ಮನಸ್ಸು, ಬುದ್ಧಿ, ಅಹಂಕಾರ ಮತ್ತು ಚಿತ್ತ 8. ಅನಂತ ಭಟ್ಟ 9. ದೇವದತ್ತ 10. ದಾರುಕ 11. ನಂದಕ 12. ನಳ 13. ಚಾರುದೇಷ್ಣ 14. ದೇವೇಂದ್ರ 15. ನಕುಲ 16. ನೊರೆಯಿಂದ 17. ಖನಕ 18. ವಿರಜಸ್ಸು 19. ಮಧು ಮತ್ತು ಕೈಟಭ 20 ಜಪಯಜ್ಞ.**

# ನಮ್ಮ ಆಯುಷ್ಯ

ಡಾ। ಎಚ್. ವಿ. ನರಸಿಂಹ ಮೂರ್ತಿ

ಅಶ್ವತ್ಥಾಮ, ಬಲಿ, ವ್ಯಾಸ ಇತ್ಯಾದಿ ಸಪ್ತ ಚಿರಂಜೀವಿಗಳ ಬಗ್ಗೆ ವ್ಯಾಖ್ಯಾನಿಸುತ್ತಾ ಕನ್ನಡ ಸಾಹಿತ್ಯ ಲೋಕದ ಹಾಸ್ಯ ಚಕ್ರವರ್ತಿ ಎಂದೇ ಪ್ರಸಿದ್ಧರಾದ ಕೈಲಾಸಂ 'ಏನುಭೀಕರ ಪರಿಸ್ಥಿತಿ! ಈ ನತದೃಷ್ಟರಿಗೆ ಈ ಹಾಳು ಲೋಕದಿಂದ ಬಿಡುಗಡೆಯೇ ಇಲ್ಲವೇ? ಇದೇನು ವರವೋ, ಶಾಪವೋ' - ಎಂದು ಹುಬ್ಬು ಹಾರಿಸಿ ಗೆಳೆಯರೊಂದಿಗೆ ಪ್ರಶ್ನಿಸಿದ್ದರಂತೆ. ಈಗ ಈ ಕಡೆ ಕೇಳಿ.

ಪ್ರಾಣಿವರ್ಗಗಳನ್ನೆಲ್ಲಾ ಸೃಷ್ಟಿಸಿದ ನಂತರ ಭಗವಂತ ಒಂದು ಆಯವ್ಯಯ ಪಟ್ಟಿ ತಯಾರಿಸಿದ. ಮಾನವನ ಆಯುರ್ದಾಯ ಮೂವತ್ತು ವರ್ಷ. ನಂತರ ಕತ್ತೆಯ ಆಯುಷ್ಯ ನಲವತ್ತು ವರ್ಷ; ನಾಯಿಗೆ ನಲವತ್ತು ವರ್ಷ. ಇನ್ನು ಕೋತಿಗೆ ಅರವತ್ತು ವರ್ಷಗಳು ಎಂದು ತೀರ್ಮಾನಿಸಿ ಪಟ್ಟಿ ತುಂಬಿದ.

ಪಟ್ಟಿ ಬಹಿರಂಗವಾದ ಮರುಕ್ಷಣ ಗದ್ದಲವೋ ಗದ್ದಲ; ಅರಿಸ್ಟಾಟಲನು, 'ಹುಟ್ಟು ರಾಜಕೀಯ ಮೃಗ'ವೆಂದು ಪಟ್ಟಿ ಹಚ್ಚಿದ ಮಾನವ ಸುಮ್ಮನಿದ್ದಾನೆ? ಇಲ್ಲ. ದೇವರ ಬಳಿಗೆ ಸಾಗಿದ. ಭಗವಂತ, ಸೃಷ್ಟಿಯಲ್ಲಿ ಸರ್ವಶ್ರೇಷ್ಠನೆನಿಸಿದ್ದ ಮಾನವನಿಗೆ ಜುಜುಬಿ ಮೂವತ್ತು ವರ್ಷಗಳ ಆಯುರ್ಮಿತಿಯೇ? ಈ ಅಲ್ಪಾಯುಷ್ಯದಲ್ಲಿ ಏತರ ಸುಖ ಅನುಭವಿಸಲು ಸಾಧ್ಯ? ಕತ್ತೆ, ನಾಯಿ, ಕೋತಿಗಳಿಗಿಂತ ಕನಿಷ್ಟವೇ? ಛೆ! ದಯಮಾಡಿ ದೀರ್ಘಾಯುಷ್ಯ ಕರುಣಿಸಪ್ಪ - ಎಂದು ಮೊರೆ ಇಟ್ಟ.

ಅತ್ತ ಕತ್ತೆ, ನಾಯಿ, ಕೋತಿಯೂ ಸಹ ಭಗವಂತನ ಬಳಿಗೆ ಬಂದು ನಿಂತು ಅಹವಾಲುಗಳನ್ನು ಮಂಡಿಸಿದುವು. ಕತ್ತೆ ಹೇಳಿತು. 'ಕಂಡ ಕಂಡವರ ಮೂಟೆ ಹೊತ್ತು, ಸಿಕ್ಕಿದವರ ಕಾಲಿನ ಒದೆ ತಿನ್ನುತ್ತಾ, ನಲ್ವತ್ತು ವರ್ಷಗಳ ದೀರ್ಘಕಾಲ ಈ ಕತ್ತೆ ಬಾಳನ್ನು ಬಾಳಲಾರೆನಪ್ಪ, ನನ್ನ ಆಯುಷ್ಯವನ್ನು ಕತ್ತರಿಸಪ್ಪ' - ಎಂದು ಬೇಡಿತು.

ಅನಂತರ ನಾಯಿ ಮುಂದೆ ಬಂದು 'ಕಂಡ - ಕಂಡವರ ಮನೆ ಬಾಗಿಲು ಕಾಯುತ್ತಾ, ಸಾಯುವ ನನ್ನ ನಾಯಿ ಬಾಳನ್ನು ಆದಷ್ಟು ಬೇಗನೆ ಸಾಕು ಮಾಡಪ್ಪ' - ಎಂದು ಹಲುಬಿತು. ಅನಂತರ ಪೆಚ್ಚು ಮೋರೆ ಹಾಕಿಕೊಂಡು ವಾನರ ಸಹ ಬಂದು 'ದೇವರೇ, ನಾನು ಎರಡು ಕಾಲಲ್ಲಿ ನಡೆದರೆ ಮೃಗಗಳು ಲೇವಡಿ ಎಬ್ಬಿಸುತ್ತವೆ. ಜನಕಲ್ಲು ಬೀರುತ್ತಾರೆ. ನನಗೇಕಪ್ಪಾ ಈ ಅರವತ್ತು ವರ್ಷದ ಬಾಳಹೊರೆ? ನನ್ನ ಶಾಪದ ಅವಧಿಯನ್ನು ತಗ್ಗಿಸಪ್ಪಾ' - ಎಂದು ಆರ್ತನಾದ ಮಾಡಿತು.

ತನ್ನ ಆಯ - ವ್ಯಯ ಪಟ್ಟಿಗೆ ಯಾವ ಬೆಂಬಲೂ ಇಲ್ಲದ್ದನ್ನು ನೋಡಿ ದೇವರಿಗೆ ಮುಜುಗರವಾಯಿತು. ಎಲ್ಲರ ಬಳಿ 'ಸೈ' ಎನಿಸಿಕೊಳ್ಳಬಲ್ಲ ಒಂದು ಜಾಣ ಮಾರ್ಗ ಹುಡುಕಬೇಕು. ಒಂದು ದಾರಿ ಇದೆ. ಇಲ್ಲಿ ಮಾನವ ಮಾತ್ರ ಆಶೆಬಡುಕ. ಮಿಕ್ಕ ಮೃಗಗಳೆಲ್ಲಾ ಖೋತಾಕ್ಕೆ ಒಪ್ಪಿವೆ. ಪಟ್ಟಿ ಅದಲು - ಬದಲು ಮಾಡಿದರೆ ಸರಿ; ಸಮಸ್ಯೆ ತೀರುತ್ತದೆ - ಎಂದು ತೀರ್ಮಾನಿಸಿದ.

'ಚೇತನಾ', ನೇರಂಬಳ್ಳಿ, ರೋಡ್, ಕೋಟೇಶ್ವರ - 576 222

ಕತ್ತೆಯ ಬಾಬ್ತಿನ ಅರ್ಧ ಇಪ್ಪತ್ತು, ನಾಯಿಯ ಲೆಕ್ಕದಲ್ಲಿ ಅರ್ಧ ಇಪ್ಪತ್ತು ಮತ್ತು ಕೋತಿ ಖೋಟಾದಲ್ಲಿ ಅರ್ಧ ಮೂವತ್ತು ವರ್ಷಗಳನ್ನು ಕತ್ತರಿಸಿ ಧಾರೆ ಎರೆದ. ಆಯಿತು; ಮಾನವನ ಆಯುಸ್ಸು ನೂರಕ್ಕೇರಿತು. 'ಪಾಪೀ ಶತಾಯುಃ' ಎನ್ನುತ್ತಾರಲ್ಲ, ಹಾಗೆ.

**ಕಡೆಗೆ ಆದದ್ದೇನು? ಮೊದಲ ಮೂವತ್ತು ವರ್ಷ ಮಾನವ ಹಾಯಾಗಿ ಬಾಳುತ್ತಾನೆ. ನಂತರ ಬಂದ ಕತ್ತೆ ಬಾಬ್ತಿನ ಇಪ್ಪತ್ತು ವರ್ಷ ಹೆಂಡತಿ, ಮಕ್ಕಳು, ಮನೆ - ಮಠಕ್ಕಾಗಿ ಕತ್ತೆಯಂತೆ ಬೆನ್ನು ಬಗ್ಗಿಸಿ ದುಡಿಯುತ್ತಾನೆ. ಅನಂತರದ ನಾಯಿ ಪಾಲಿನಲ್ಲಿ ಕುಟುಂಬದ ಆಸ್ತಿಪಾಸ್ತಿಗಳ ಕಾವಲು ನಾಯಿಯಾಗಿ ಜೀವ ಸವೆಸುತ್ತಾನೆ. ಕಡೆಗೆ ವಾನರದೆಶೆ ಮೂವತ್ತು ವರ್ಷ. ಹಲ್ಲುಬಿದ್ದು, ಮುಖಸುಕ್ಕಾಗಿ, ನಡುಬಗ್ಗಿ, ಥೇಟ್ ವಾನರನೇ ಆಗುತ್ತಾನೆ. ನೋಡಿದಿರಾ, ಮಾನವ ಕಾಡಿ - ಬೇಡಿ ಪಡೆದುಕೊಂಡ ವರದ ಫಲಿತಾಂಶ! ಇದು ಮಾನವನ ಆಶೆ ಬಡುಕುತನದ ಕತೆ; ನಮ್ಮ ಆಯುಷ್ಯದ ಕತೆ; ಪರಮಾತ್ಮನ ನ್ಯಾಯ ತತ್ತ್ವರತೆ.**

## ನುಡಿಮುತ್ತುಗಳು :

ಜಾಹ್ನವಿ ಆಚಾರ್ಯ, ಬೆಂಗಳೂರು

★ ನಿಮ್ಮ ಕರ್ತವ್ಯವನ್ನು ಕೊನೆತನಕ ಮಾಡುತ್ತಿರುವುದಕ್ಕೆ ಪರಮಾರ್ಥ ಎನ್ನುತ್ತಾರೆ.

★ ಫಲಾಪೇಕ್ಷೆಯಿಂದ ಮಾಡಿದ ಕಾರ್ಯಕ್ಕೆ ಕರ್ಮವೆನ್ನುತ್ತಾರೆ.

★ ಈಶ್ವರನ ಸ್ಮರಣೆಯಲ್ಲಿ ಕರ್ಮಗಳನ್ನು ಮಾಡಿದರೆ ವಾಸನೆಯು ಭಾದಿಸುವುದಿಲ್ಲ. ಇದಕ್ಕೆ ನಿರಾಸಕ್ತ ಕರ್ಮವೆನ್ನುತ್ತಾರೆ.

★ ಕರ್ತವ್ಯದಲ್ಲಿ ಭಗವಂತನ ಸ್ಮರಣ ವನ್ನಿಟ್ಟುಕೊಳ್ಳುವುದೇ ಧರ್ಮದ ಮಾರ್ಗ.

★ ಯಾರದೋ ನಿಂದಾ, ಸ್ತುತಿ ಮಾಡದೆ ಇರುವವನೆ ಜಾಣನೆಂದು ತಿಳಿಯಬೇಕು.

★ ಸತ್ಯದ ಗುರುತು ಮಾಡಿಸುವವನೇ ಸಂತ.

★ ತ್ಯಾಗ ಮತ್ತು ಭಗವಂತನ ಸ್ಮರಣೆ ಇದೇ ಯಜ್ಞದ ನಿಜವಾದ ಅರ್ಥ.

★ ವಾಸನೆಗಳನ್ನು ಇಟ್ಟುಕೊಳ್ಳದೆ ಕರ್ಮವನ್ನು ಮಾಡುವುದೆ ಸನ್ಯಾಸ.

★ ದೇವರಅಸ್ತಿತ್ವವು ಪೂರ್ಣವಾಗಿ ಆಗುವುದೇ ಜಗತ್ತಿನ ವಿಸ್ಮರಣೆ.

★ ಭಗವಂತನು ನಮ್ಮ ಕೃತಿಗಳನ್ನು ನೋಡುತ್ತಿರುವನೆಂಬ ಭಾವನೆಯನ್ನು ದೃಢವಾಗಿ ಇಟ್ಟುಕೊಳ್ಳುವುದೇ ಭಕ್ತಿಯ ಲಕ್ಷಣ.

★ ದೇಹ, ಬುದ್ಧಿಯನ್ನು ದಾಟ ಹೋದ ಮೇಲೆ ಆಗುವ ಜ್ಞಾನಕ್ಕೆ ಆತ್ಮಜ್ಞಾನ ಎನ್ನುತ್ತಾರೆ.

# ಶ್ರೀರಾಮನ ಪ್ರಜಾಪ್ರೇಮ

ಶ್ರೀರಾಮನು ಮರ್ಯಾದಾ ಪುರುಷೋತ್ತಮ. ರಾಮಾಯಣದಲ್ಲಿ ಸುಂದರ ಕಾಂಡದಲ್ಲಿ ಹನುಮಂತ ಹೇಳುತ್ತಾನೆ. मर्यादानां थ लोकस्य कर्ता कारपिताथ सः ಲೋಕದ ಮರ್ಯಾದೆಯನ್ನು ತಾನೂ ಪಾಲಿಸಿ, ಜನರೂ ಪಾಲಿಸುವಂತೆ ಮಾಡುವವನು. ಆದರೆ ರಾಮನಲ್ಲಿ ಇಂತಹ ಗುಣಗಳಲ್ಲದೇ ಪ್ರಜೆಗಳು ಅವನನ್ನು ಅಗಾಧವಾಗಿ ಪ್ರೀತಿಸುವ ಅನೇಕ ಗುಣಗಳಿದ್ದವು. ಆದ್ದರಿಂದ ಲೇ ರಾಮನನ್ನು ಅವನ ಆಡಳಿತವನ್ನು ಪ್ರಜೆಗಳು ಸಾವಿರಾರು ವರ್ಷಗಳ ನಂತರವು ಮರೆತಿಲ್ಲ. ಮರೆಯಲಾರರು.

ಶ್ರೀರಾಮ ಕಪಿ ಸೇನಾ ಸಮೇತನಾಗಿ ಲಂಕೆಯನ್ನು ಬೇಧಿಸಿ ರಾವಣನನ್ನು ಸಂಹರಿಸಿದ. ಅವನ ಅಮಷ್ಟಿ ಸಂಹಾರ ಕಾರ್ಯದಲ್ಲಿ ಕಪಿಗಳು ತಮ್ಮ ಅಳಿಲು ಸೇವೆ ನಡೆಸಿದ್ದಾರೆ. ಆದರೆ ಕಪಿಗಳ ಒಂದು ಕುತೂಹಲ ಮಾತ್ರ ತೀರಲಿಲ್ಲ. ಅದು ಯಾವುದೆಂದರೆ ಸೀತಾದೇವಿ ನಾವು ಯಾರನ್ನು ಮರಳಿ ಪಡೆಯಲು ಇಷ್ಟು ದೂರ ಬಂದು ಹೋರಾಡಿದ್ದೇವೆ, ಆ ಸೀತೆಯನ್ನು ಒಮ್ಮೆ ನೋಡಲೇಬೇಕೆಂಬುದೇ ಆ ಕುತೂಹಲ. ರಾವಣನ ಸಂಹಾರ ನಡೆದ ನಂತರ ರಾಮ ಹನುಮಂತನನ್ನು ಸೀತೆಯ ಹತ್ತಿರ ಕಳುಹಿಸುತ್ತಾನೆ. ರಾಮ ದೂತ ಹನುಮಂತ ಅವಳಿಗೆ ರಾವಣನ ಸಂಹಾರವಾದ ಸಂತೋಷದ ಸುದ್ದಿಯನ್ನು ತಿಳಿಸುತ್ತಾನೆ. ಅನಂತರ ಸೀತೆಯನ್ನು ವಸ್ತ್ರದಿಂದ ಮುಚ್ಚಿರುವ ಪಲ್ಲಕಿಯಲ್ಲಿ ರಾಮನಿದ್ದೆಡೆಗೆ ಕರೆತರುತ್ತಾರೆ. ಬರುತ್ತಿರುವ ಸೀತೆಯನ್ನು ನೋಡಲು ಜನಸ್ತೋಮ. ತುಂಬಿಹೋಗುತ್ತಾರೆ. ನೂಕುನುಗ್ಗಲಾಗಿ ಜನರು ಸೇರುತ್ತಾರೆ. ಆಗ ಲಂಕೆಯ ಒಡೆಯ ವಿಭೀಷಣ ಸೈನಿಕರಿಗೆ ಆದೇಶ ನೀಡುತ್ತಾನೆ. ಆಗ ಕಪಿಗಳ ಹಾಗೂ ಜನರ ಬಹಳ ದಿನದ ಕುತೂಹಲಕ್ಕೆ ನೀರೆಚಿದಂತಾಗುತ್ತದೆ. ಆದರೆ ಸ್ವಾಮಿಯಾದ ರಾಮನಿಗೆ ಇವೆಲ್ಲ ಅರ್ಥವಾಗುತ್ತದೆ. ಆದ್ದರಿಂದಲೇ ರಾಮ ವಿಭೀಷಣನಿಗೆ ಕವರುತ್ತಾನೆ. किमर्थमामताहाम किशपतेऽयंत्तया जनः तिवर्तयैनं उद्वेगं जनोऽयं स्वजतो मम। ಏತಕ್ಕೋಸ್ಕರ ನೀನು ನನ್ನ ಎದುರು ಈ ಜನರಿಗೆ ತೊಂದರೆ ಕೊಡುತ್ತಿರುವಿ. ರಾಮನಿಗೆ ನನ್ನವರು. ಹಾಗಾದರೆ ಸೀತೆಯನ್ನು ಇವರೆಲ್ಲರೂ ನೋಡಬಾರದೇ. ಅವಳು ಹೆಣ್ಣಲ್ಲವೆ. ಎಂಬ ಪ್ರಶ್ನೆಗೆ ರಾಮ ಉತ್ತರಿಸುತ್ತಾನೆ. तकृच्छेषु न युद्धेषु स्वपंवरेतक्रतौ तो विवाहे वा दर्श नं इष्पते स्त्रियः। ಬಹಳ ತೊಂದರೆಯುಂಟಾದಾಗ, ಯುದ್ಧದಲ್ಲಿ, ಸ್ವಯಂವರದಲ್ಲಿ, ಮದುವೆಯಲ್ಲಿಯೂ ಹೆಂಗಸರನ್ನು ನೋಡಿದರೆ ತಪ್ಪಿಲ್ಲ. ಇಲ್ಲಿ ಸೀತೆ ದೊಡ್ಡ ಸಂಕಷ್ಟದಿಂದ ಪಾರಾಗಿ ಬಂದಿದ್ದಾಳೆ. ಅಂತವಳನ್ನು ಈ ಪ್ರಜೆಗಳು ನೋಡಿದರೆ ತಪ್ಪಿಲ್ಲ. ರಾಮ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತಾನೆ. किसृच्य शिब्रिको तस्मात् पह्ायां शव पिसंर्यतु ಅವಳು ಪಲ್ಲಕಿಯಿಂದ ಕೆಳಗಿಳಿದು ಕಾಲಿನಿಂದಲೇ ನಡೆದು ನನ್ನನ್ನು ಸೇರಲಿ. ಇನ್ನೊಂದಿಗಿರುವ ಇವಳನ್ನು ಎಲ್ಲರೂ ನೋಡಲಿ.

## ಸಾಂಸ್ಕೃತಿಕ ರಸಪ್ರಶ್ನೆ

ಡಾ। ಎಚ್. ವಿ. ನರಸಿಂಹ ಮೂರ್ತಿ, ಕುಂದಾಪುರ

1. ಸುಗ್ರೀವನ ಸೇನಾಪತಿಯ ಹೆಸರೇನು?
2. 'ಸ್ತ್ರೀಯರು ರಹಸ್ಯವನ್ನು ಕಾಪಾಡುವಲ್ಲಿ ವಿಫಲರಾಗಲಿ' - ಎಂದು ಶಾಪ ನೀಡಿದವನು ಯಾರು?
3. 'ಬೈಸಾಖಿ' ಯಾವ ರಾಜ್ಯದ ಹಬ್ಬ ?
4. ಪಂಚಾಣುವ್ರತಗಳು ಯಾವುವು ?
5. 'ನಾನುಶೋಚಂತಿ ಪಂಡಿತಾಃ' ಎಂಬುದು ಗೀತೆಯ ಯಾವ ಯೋಗದಲ್ಲಿದೆ?
6. ಕೇರಳ ರಾಜ್ಯದ ಪ್ರಸಿದ್ಧ ಹಬ್ಬ ಯಾವುದು?
7. ಅಂತಃಕರಣ ಚತುಷ್ಟಯಗಳು ಯಾವುವು?
8. ಸಂಸ್ಕೃತದ 'ಭಾರತ ಚಂಪೂ' ಗ್ರಂಥದ ಕವಿ ಯಾರು?
9. ಅರ್ಜುನನ ಶಂಖದ ಹೆಸರೇನು?
10. ಕೃಷ್ಣನ ಸಾರಥಿ ಯಾರು?
11. ಮಹಾವಿಷ್ಣುವಿನ ಕೈಯಲ್ಲಿರುವ ಖಡ್ಗದ ಹೆಸರೇನು?
12. ಋತುಪರ್ಣನಲ್ಲಿ ಬಾಹುಕನೆಂಬ ಹೆಸರಿನಿಂದ ಸಾರಥಿಯಾದವನು ಯಾರು?
13. ಶ್ರೀಕೃಷ್ಣ - ರುಕ್ಮಿಣಿಯವರ ಕಿರಿಯ ಮಗನ ಹೆಸರೇನು?
14. ಅರ್ಜುನನಿಗೆ ದೇವದತ್ತನೆಂಬ ಶಂಖವನ್ನು ನೀಡಿದವರು ಯಾರು?
15. ಶರಭಧ್ವಜನೆಂದರೆ ಯಾರು?
16. ನಮುಚಿಯೆಂಬ ರಾಕ್ಷಸನನ್ನು ಇಂದ್ರನು ಯಾವುದರಿಂದ ಕೊಂದನು?
17. ಪಾಂಡವರು ಅರಗಿನ ಮನೆಯಿಂದ ಪಾರಾಗಲು ಸುರಂಗಮಾರ್ಗವನ್ನು ಕೊರೆದವರು ಯಾರು?
18. ಶ್ರೀಕೃಷ್ಣನ ದರ್ಶನಕ್ಕಾಗಿ ಬರುವ ಜನರು ಕುಳಿತು ಕೊಳ್ಳಬೇಕಾಗಿದ್ದ 'ನಿರೀಕ್ಷಾ ಗೃಹ'ದ ಹೆಸರೇನು?
19. ಶ್ರೀಕೃಷ್ಣನ ಕಿವಿಯ ಕೆಸರಿನಿಂದ ಹುಟ್ಟಿದ ರಾಕ್ಷಸರು ಯಾರು?
20. ಯಜ್ಞಗಳಲ್ಲಿ ತಾನು ಯಾವ ಯಜ್ಞವೆಂದು ಭಗವಂತನು ಗೀತೆಯಲ್ಲಿ ಹೇಳಿಕೊಂಡಿದ್ದಾನೆ.

ಸ್ಥಾಪನೆ : 1977 ದೂರವಾಣಿ : 2521607

**ಜನತಾ ಕೋ - ಆಪರೇಟಿವ್ ಬ್ಯಾಂಕ್ ಲಿ. ಉಡುಪಿ**

★ ಸಂಜೆ ಮತ್ತು ಭಾನುವಾರ ಬ್ಯಾಂಕಿಂಗ್ ಸೇವೆ
★ ಠೇವಣಿಗಳಿಗೆ 1% ಅಧಿಕ ಬಡ್ಡಿ

**ಸ್ನೇಹಮಯ ಸೌಹಾರ್ದ ಸೇವೆಯೇ ಬ್ಯಾಂಕಿನ ಧ್ಯೇಯ**

ಮಹಾಭಾರತದ ಅನುಸಂಧಾನ

# ಮಾಡಿ ಮಾಡಿಸುವ ಪ್ರಕ್ರಿಯೆ

ಸಗ್ರಿ ರಾಘವೇಂದ್ರ ಉಪಾಧ್ಯಾಯ

**ಏವಮಧ್ಯಾತ್ಮನಿಷ್ಠಂ ಹಿ ಭಾರತಂ ಸರ್ವಮುಚ್ಯತೇ** - ಎಂದು ಶ್ರೀ ಮಧ್ವಾಚಾರ್ಯರು ಮಾರ್ಗದರ್ಶನ ನೀಡಿರುವಂತೆ ಸಮಗ್ರ ಮಹಾಭಾರತವು ಅಧ್ಯಾತ್ಮಪರವಾಗಿ ಅಂದರೆ ಪ್ರತಿಯೊಬ್ಬ ಜೀವಾತ್ಮನ ಬದುಕಿಗೂ ಸಂಬಂಧಪಡುವಂತೆ ತೆರೆದುಕೊಳ್ಳಬಲ್ಲದು. ಮಹಾಭಾರತದ ಪ್ರತಿಯೊಂದು ಭಾಗವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದರೆ ಅದರಿಂದ ಸೂಚಿತವಾಗುವ ಅಧ್ಯಾತ್ಮ ಅರ್ಥವನ್ನು ಗುರುತಿಸಬಹುದಾಗಿದೆ.

## ಶ್ರೀಕೃಷ್ಣ ಚಕ್ರಹಿಡಿದು ಧಾವಿಸಿದ ಸನ್ನಿವೇಶ

ಮಹಾಭಾರತ ಯುದ್ಧದಲ್ಲಿ ಸಾರಥಿಯಾಗಿ ಪಾತ್ರವಹಿಸಿದ್ದ ಶ್ರೀಕೃಷ್ಣ ಮೂರನೆಯ ಹಾಗೂ ಒಂಭತ್ತನೆಯ ದಿನಗಳಂದು ಚಕ್ರವನ್ನು, ಬಾರಕೋಲನ್ನು ಹಿಡಿದುಕೊಂಡು ತಾನೇ ಕೌರವರ ವಿರುದ್ಧ ಕಾದಾಡುವವನಂತೆ ಭೀಷ್ಮರ ವಿರುದ್ಧ ಧುಮುಕಿದ್ದು ತುಂಬ ವೈಶಿಷ್ಟ್ಯಪೂರ್ಣ ಘಟನೆ ಎನಿಸಿದೆ. ಮಹಾಭಾರತದ ಈ ಭಾಗ ಅನೇಕ ಅಧ್ಯಾತ್ಮಿಕ ಸಂದೇಶಗಳನ್ನು ಸೂಚಿಸಿಕೊಡುವುದು.

## ಮಾಡಿ ಮಾಡಿಸುವವನು :

'ಸತ್ಯಸಂಕಲ್ಪ' ನಾದ ಶ್ರೀಕೃಷ್ಣ ತಾನು ಮಹಾಭಾರತ ಯುದ್ಧದಲ್ಲಿ ಸಾರಥಿಯಾಗಿಯಷ್ಟೇ ಪಾಲ್ಗೊಳ್ಳುವುದೆಂದು ಸಂಕಲ್ಪಿಸಿದ್ದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುವ ಸಂಭವವೇ ಇಲ್ಲ. ಆದರೆ 'ಮೃದು'ಯೋಧಿಯಾಗಿದ್ದ ಅರ್ಜುನ ಯುದ್ಧದಲ್ಲಿ ತೀವ್ರವಾಗಿ ತೊಡಗುವಂತೆ ಶ್ರೀಕೃಷ್ಣಕೈಗೊಂಡ ತಂತ್ರವಿದು. ಶ್ರೀಕೃಷ್ಣನ ತಂತ್ರ ಫಲಿಸುವುದು. ಶ್ರೀಕೃಷ್ಣ ಉದ್ದೇಶಿಸುವಂತೆ ಅರ್ಜುನ ತೀವ್ರವಾಗಿ ಕಾದಾಡಲು ಒಪ್ಪಿಕೊಳ್ಳುವನು.

**'ನಹಿ ಪ್ರತಿಬಿಂಬೇ ಕ್ರಿಯಾ ಸಹಿ ಬಿಂಬ ಕ್ರಿಯಯೈವ ಕ್ರಿಯಾವಾನ್'** - ಎಂದು ಶ್ರೀ ಮಧ್ವರು ಸಂದೇಶಿಸಿರುವಂತೆ ಪ್ರತಿಬಿಂಬನಾದ ಜೀವನದಲ್ಲಿ ಸ್ವತಂತ್ರವಾಗಿ ಯಾವುದೇ ಕ್ರಿಯೆ ಇಲ್ಲ. ಬಿಂಬರೂಪಿಯಾದ ಭಗವಂತನ ಕ್ರಿಯೆಯಿಂದಲೇ ಅವನ ಪ್ರತಿಬಿಂಬನಾದ ಜೀವನಲ್ಲಿ ಕ್ರಿಯೆ ಉಂಟಾಗುವುದು. ಭಗವಂತನ ಈ 'ಮಾಡಿ ಮಾಡಿಸುವ' ಪ್ರಕ್ರಿಯೆ ತಾನು ಯುದ್ಧಕ್ಕೆ ತೊಡಗಿ ಅರ್ಜುನನನ್ನು ಯುದ್ಧದಲ್ಲಿ ತೊಡಗಿಸಿರುವ ಈ ಘಟನೆಯಿಂದ ಸೂಚಿತವಾಗುವುದು.

## 'ದಶಪದ'ಪ್ರಾಪ್ಯ

ಕ್ರೋಧಗೊಂಡವನಂತೆ ಭೀಷ್ಮನೆಡೆಗೆ ಧುಮುಕಿದ ಶ್ರೀಕೃಷ್ಣನನ್ನು ಅರ್ಜುನ

ವೇದಾಂತ ಉಪನ್ಯಾಸಕರು, ಸಂಸ್ಕೃತ ಕಾಲೇಜು, ಉಡುಪಿ



ಬಲಾತ್ಕಾರದಿಂದ ತಡೆದರೂ ಹತ್ತು ಹೆಜ್ಜೆಗಳಷ್ಟು ಮುಂದೆ ಸರಿಯಲು ಹತ್ತನೇ ಹೆಜ್ಜೆ ತಲುಪುವಾಗ ಕಷ್ಟಬಿಟ್ಟು ತಡೆಯಲು ಸಮರ್ಥನಾದನು -

**'ಬಲಾನ್ನಿಜಗ್ರಾಹ ಹರಿಂ ಕಿರೀಟೀ ಪದೇಽಥರಾಜನ್ ದಶಮೇ ಕಥಂಚಿತ್'** - (ಮ. ಭಾ. ಭೀಷ್ಮ 59-101) ಹೀಗೆ 'ದಶಪದ'ದಲ್ಲಿಯೇ ಶ್ರೀಕೃಷ್ಣ ಅರ್ಜುನನಿಗೆ ಪ್ರಾಪ್ಯನಾದುದು ಆಕಸ್ಮಿಕವಲ್ಲ. ಒಂಭತ್ತು ಅಥವಾ ಹನ್ನೊಂದು ಹೆಜ್ಜೆಗಳನ್ನು ಸಾಗದೆ ಹತ್ತನೇ ಹೆಜ್ಜೆಯಲ್ಲೇ ಲಭ್ಯನಾಗಬೇಕೆಂದರೆ ತಾನು 'ದಶಪದ'ಲಭ್ಯ ಎಂದು ಸಾಂಕೇತಿಕವಾಗಿ ಭಕ್ತರಿಗೆ ಸೂಚಿಸಿಕೊಡುವುದೂ ಉದ್ದೇಶ.

**'ಏತಾವತೀ ಹಿ ಸಂಖ್ಯಾ ದಶದಶಶತಸ್ತಚ್ಛತಂ ದಶ ಶತಾನಿ ತತ್ ಸಹಸ್ರಂ ತತ್ ಸರ್ವಂ'** ಎಂದು ಐತರೇಯೋಪನಿಷತ್ತು ತಿಳಿಸುವಂತೆ ಸರ್ವಸಂಖ್ಯೆಗಳಿಗೂ ಮೂಲವಾಗಿರುವ 'ದಶ' ಸಂಖ್ಯೆ ಸರ್ವ ಸಂಖ್ಯಾ ವಾಚಕವೂ ಆಗಬಲ್ಲದು. ಆದುದರಿಂದ 'ದಶಪದ' ಗಳಿಂದ ಲಭ್ಯ ಎಂದರೆ ತನ್ನ ಜೊತೆಗೆ ಎಲ್ಲ ಹೆಜ್ಜೆಗಳಿಂದಲೂ ಸಾಗಿ ಬಂದಾಗಷ್ಟೇ ತಾನು ಅಂತಹ ಭಕ್ತನಿಗೆ ಲಭ್ಯ - ಎಂದು ಭಗವಂತನು ಸಾಂಕೇತಿಕವಾಗಿ ಸೂಚಿಸಿರುವನು.

## ಶರಣಾಗತಿಗೇ ಒಲಿಯುವವನು :

ಅರ್ಜುನ ಮೊದಲು ಕೃಷ್ಣನನ್ನು ಕೈಗಳಿಂದ ಹಿಡಿಯಲು ಯತ್ನಿಸಿದ. ಆದರೆ 'ಜಗಾಮೈವೈನಮಾದಾಯ ವೇಗೇನ ಪುರುಷೋತ್ತಮಃ' - ಎಂದಿರುವಂತೆ ಕೃಷ್ಣ ಅರ್ಜುನನನ್ನೂ ಎಳೆದುಕೊಂಡು ಮುಂದೆ ಸಾಗುವನು. ಆದರೆ ಅರ್ಜುನ **'ಪಾರ್ಥಸ್ತು ವಿಷ್ಟಭ್ಯ ಬಲೇನ ಪಾದೌ...'** ಎಂದಿರುವಂತೆ ಗಟ್ಟಿಯಾಗಿ ಕೃಷ್ಣನ ಕಾಲುಗಳನ್ನು ಹಿಡಿದಾಗ ಅದಕ್ಕೆ ಒಲಿಯುವನು ಅವನು. ಇದರಿಂದ 'ಅನ್ಯಥಾ ಶರಣಂ ನಾಸ್ತಿ...' ಎಂಬುದಾಗಿ ಭಕ್ತರು ತನ್ನ ಕಾಲುಗಳನ್ನು ಹಿಡಿದು 'ಶರಣಾಗತಿ'ಗೆ ಒಳಗಾದಾಗಷ್ಟೇ ಒಲಿಯುವವನು ತಾನು ಎಂದು ಸೂಚಿಸಿಕೊಟ್ಟಿರುವನು.

## ವಾಮನ ವ್ಯಕ್ತಿತ್ವ :

ಸಂಜಯನು ಧೃತರಾಷ್ಟ್ರನಿಗೆ ಶ್ರೀಕೃಷ್ಣನ ಈ ಚಮತ್ಕಾರವನ್ನು ವರದಿಸುವಾಗ **'....ಕ್ರುದ್ಧೋ ಮಹೇಂದ್ರಾವರಜಃ ಪ್ರಮಾಥೀ...'** (59-90) **'...ಕ್ರುದ್ಧಂ ಮಹೇಂದ್ರಾವರಜಂ ಸಮೀಕ್ಷ್ಯ...'** (59-93) **'...ತ್ವಯಾಹಮಿಂದ್ರಾನುಜ ಸಂಪ್ರಯುಕ್ತಃ...'** (29-203) ಎಂಬುದಾಗಿ ಮೂರು ಬಾರಿ ಶ್ರೀಕೃಷ್ಣನನ್ನು ಇಂದ್ರಾನುಜ ಎಂದರೆ ವಾಮನ ಎಂದು ಗುರುತಿಸುವ ಮೂಲಕ ವಾಮನ ಹೇಗೆ ಬಲಿಯ ನಿಗ್ರಹ ಮಾಡಿ ದೇವೇಂದ್ರನ ಐಶ್ವರ್ಯವನ್ನು ಕೊಡಿಸಿದನೋ ಹಾಗೆಯೇ ಶ್ರೀಕೃಷ್ಣ ಭೀಷ್ಮನ ನಿಗ್ರಹ ನಡೆಸಿ ಅರ್ಜುನನಿಗೆ ಅಧಿಕಾರ, ಐಶ್ವರ್ಯಗಳನ್ನು ಕೊಡಿಸುವನೆಂಬ ಧ್ವನಿ ಮೂಡುವಂತೆ ಮಾಡಿರುವನು.

## ಸರ್ವ ಪ್ರಹರಣಾಯುಧ ವ್ಯಕ್ತಿತ್ವ :

ಶ್ರೀಕೃಷ್ಣ ಮೂರನೇ ದಿನದಂದು ತನ್ನ ಸುದರ್ಶನ ಚಕ್ರವನ್ನು ಹಿಡಿದುಕೊಂಡು ಭೀಷ್ಮನಲ್ಲಿಗೆ ಸಾಗಿದ್ದರೆ, ಒಂಭತ್ತನೇ ದಿನದಂದು **'.... ಪ್ರತೋದಪಾಣಿಸ್ತೇಜಸ್ವೀ ಸಿಂಹವದ್ ವಿನದನ್ ಮುಹುಃ'** (106-57) ಎಂದಿರುವಂತೆ ಬಾರಕೋಲನ್ನೇ ಆಯುಧದಂತೆ

ಹಿಡಿದುಕೊಂಡು ಸಾಗಿದ್ದನು.

**ಯದೃಚ್ಛಯೈವ ಸರ್ವಂ ತು ಮನಸಾ ದೇಹತೋಽಪಿ ವಾ ।**

**ಕರ್ತುಂ ಶಕ್ತೋಽಪಿ ಚಾಸ್ತ್ರಾದ್ಯಾ ಲೀಲೈವಾನಂತಶಕ್ತಿತಃ ॥**

ಎಂದು ವಾರಾಹ (ಭಾ. ತಾ. ನಿ.) ಸಾರುತ್ತಿರುವಂತೆ ತನ್ನ ಇಚ್ಛೆಯಿಂದಲೇ, ಮನಸ್ಸಿನಿಂದಲೇ, ದೇಹದಿಂದಲೇ ಏನನ್ನು ಬೇಕಾದರೂ ಮಾಡಲು ಸಮರ್ಥನಾದ ಭಗವಂತನು ಅಸ್ತ್ರಶಸ್ತ್ರಗಳನ್ನೆಲ್ಲ ಬರೇ ಲೀಲೆಯಿಂದ ಧಾರಣೆ ಮಾಡುವವನು. ಆದುದರಿಂದ ಅವನ ಪಾಲಿಗೆ ಬಾರಕೋಲು ಕೂಡಾ ಆಯುಧ ಆಗಬಲ್ಲದು. 'ಸರ್ವ ಪ್ರಹರಣಾಯುಧ' - ಎನಿಸುವ ಅವನ ವ್ಯಕ್ತಿತ್ವ ಇದರಿಂದ ಸೂಚಿತವಾಗಬಲ್ಲದು.

## ದಂಡನೆಯೂ ಅನುಗ್ರಹ :

ಶ್ರೀಕೃಷ್ಣ ಭೀಷ್ಮರನ್ನು ದಂಡಿಸಲು ಮುನ್ನುಗ್ಗಲು ಎರಡು ಬಾರಿಯೂ ಭೀಷ್ಮ ಅದಕ್ಕಾಗಿ ಕೃಷ್ಣನನ್ನು ಜರೆಯದೆ, ಆ ಬಗ್ಗೆ ಭೀತನೂ ಆಗದೆ, 'ಏಹ್ಯೇಹಿ ದೇವೇಶ ಜಗನ್ನಿವಾಸ...' 'ಏಹ್ಯೇಹಿ ಪುಂಡರೀಕಾಕ್ಷ...' - ಎಂದು ಬಾಯ್ತುಂಬ ಹೊಗಳಿ 'ಪ್ರಹರಸ್ವ ಯಥೇಷ್ಟಂ ವೈ ದಾಸೋಽಸ್ಮಿ ತವ ಚಾನಘ' - ನಾನು ನಿನ್ನ ದಾಸ. ನಿನಗೆ ಇಷ್ಟ ಬಂದಂತೆ ನನಗೆ ದಂಡನೆ ನೀಡು - ಎಂದು ಪ್ರಾರ್ಥಿಸುವನು.

ನಮ್ಮ ಅಪರಾಧಗಳಿಗಾಗಿ ಭಗವಂತನು ಆಧಿ, ವ್ಯಾಧ್ಯಾದಿರೂಪದಲ್ಲಿ ದಂಡನೆ ನೀಡಿದಾಗ ನಾವು ಅದಕ್ಕೆ ಹೇಗೆ ಸ್ಪಂದಿಸಬೇಕೆಂಬುದು ಭೀಷ್ಮರ ಈ ನಡತೆಯಿಂದ ಸೂಚಿತವಾಗುವುದು.

**ದಂಡೋಽಪಿ ಭಗವಚ್ಛೀರ್ಣೋ ಮಮೈಷೋಽನುಗ್ರಹಃ ಕೃತಃ।**

**ಇತಿ ಭಕ್ತ್ಯಾ ಚಿಂತಯತಾಂ ಶುಭಕಾರೀ ಭವತ್ಯಲಮ್ ॥** (ಭಾಗ. ತಾ. ನಿ.)

ಎಂದು ಪ್ರಮಾಣ ತಿಳಿಸುವಂತೆ ಕರ್ಮಾಧ್ಯಕ್ಷನಾದ ಭಗವಂತನಿಂದ ನಮ್ಮ ಅಪರಾಧಗಳಿಗನುಗುಣವಾಗಿ ದಂಡನೆ ದೊರೆತಾಗ, ಅದು ಅಪರಾಧದ ಪ್ರಮಾರ್ಜನೆಗಾಗಿ ಅವನು ಅಪರಾಧ ಮಾಡಿರುವ ಅನುಗ್ರಹವೇ ಹೊರತು ನಿಗ್ರಹವಲ್ಲ - ಎಂದು ಭಕ್ತಿಯಿಂದ ಅನುಸಂಧಾನ ನಡೆಸಿದಲ್ಲಿ ದಂಡನೆಯೂ ಅವನ ಪಾಲಿಗೆ ಶ್ರೇಯಸ್ಕರವೇ ಆಗುವುದು. ಭೀಷ್ಮರ ಆ ಸಂದರ್ಭದ ಪ್ರವೃತ್ತಿ ಈ ತತ್ವವನ್ನು ಮೌನವಾಗಿ ಸಾರುವುದು.

## ವ್ಯಕ್ತಿತ್ವದ ಕೆಲವು ಮುಖಗಳ ಪ್ರದರ್ಶನ :

ಹೀಗೆ ಮಹಾಭಾರತ ಯುದ್ಧದ ಮೂರನೆಯ ಹಾಗೂ ಒಂಭತ್ತನೆಯ ಎರಡು ದಿನಗಳಲ್ಲಿ ಶ್ರೀಕೃಷ್ಣ ರಥದಿಂದ ಧುಮುಕಿ ಭೀಷ್ಮರಲ್ಲಿಗೆ ತಾನೇ ಯುದ್ಧ ಮಾಡುವೆನೆಂದು ಧಾವಿಸಿದ್ದು 'ಮೃದುಯೋಧಿ'ಯಾಗಿದ್ದ ಅರ್ಜುನನ ಯುದ್ಧದಲ್ಲಿ ತೀವ್ರತೆಯನ್ನು ಉಂಡು ಮಾಡುವುದರ ಜೊತೆಗೆ ಸಾಧಕರಿಗೆ, ಭಕ್ತರಿಗೆ ಪೋಷಕವಾಗುವಂತೆ ತನ್ನ ವ್ಯಕ್ತಿತ್ವದ ಕೆಲವು ಮುಖಗಳನ್ನು ತೋರಿಸಿಕೊಡುವುದಕ್ಕಾಗಿಯೂ ಕೂಡಾ.



# ಗೋವರ್ಧನಧಾರಿ ಶ್ರೀ ಕೃಷ್ಣ ದೇಗುಲ

ಕನ್ನಡನಾಡಿನ ಸುಂದರ ನಗರಿ
ಉದ್ಯಾನ ನಗರಿ ಬೆಂಗಳೂರು
ಹಸುರಿನ ಪರಿಸರ - ಗುಲ್ಮೊಹರ್ ಅಂದದ
ಸುಂದರ ಮಂದಿರ ಗೋಪಾಲನಾ
ಸುಗುಣೇಂದ್ರ ತೀರ್ಥರ ಕನಸಿನ ಗುಡಿಯು
ಗಿರಿಧಾರಿ ಚಂದ್ರನ ಮಂದಿರವು
ಶಿಲೆಯಲಿ ಮೂಡಿದ ಶ್ರೀ ಕೃಷ್ಣನಿಲ್ಲಿ
ನಿಂದಿಹ ಪರ್ವತ ತಳದಲ್ಲಿ
ಎಡಕಿರು ಬೆರಳಿಂದೆತ್ತಿದ ಗಿರಿಯ
ಶ್ಯಾಮ ಸುಂದರ ನಗು ನಗುತ
ಹೇಮ ರಜತ, ನವರತ್ನಗಳೆಲ್ಲವೂ
ನಿಧಿ ಕುಂಭದಲಿ ತುಂಬಿಸಿರೆ
ಮಂದಹಾಸದ ಸುಂದರ ವದನ
ಕುಂಭದ ಮೇಲೆ ಸ್ಥಿತನಾದ
ಕುಂಭಾಭಿಷೇಕದ ಪವಿತ್ರ ವಿಧಿಯಲಿ
ದೇವತ್ವ ಪಡೆದ ಬಿಂಬವಿದು
ಚಂದ್ರ ಬಿಂಬದ ಚೆಲುವ ಕೃಷ್ಣನು
ನಿಂದಾ ಬಸವನಗುಡಿಯಲ್ಲಿ
ಗಗನ ಚುಂಬಿಯಾ ಪರ್ವತವಿಲ್ಲಿ
ಭಕ್ತರ ಸೆಳೆವುದು ದಿನಗಳಲಿ
ಚಂದ್ರಚಕೋರನ ಮಂದಸ್ಮಿತನ
ಪಿಳ್ಳಂಗೋವಿ ಚೆಲ್ವ ಕೃಷ್ಣನ
ನಿರುತ ಪಾಡುವ ಧನ್ಯರಾದೆವು
ಆನಂದ ಚಂದ್ರನ ಕರುಣೆಯಲಿ

ಕೋಟೇಶ್ವರ ಸೂರ್ಯನಾರಾಯಣ ರಾವ್

# ಪುತ್ತಿಗೆ ಶ್ರೀಗಳು ಆಸ್ತಿಕರಿಗೆ ನೀಡಿದ ಅಪೂರ್ವ ಕೊಡುಗೆ – ಶ್ರೀ ಗೋವರ್ಧನ ಮಂದಿರ

**ಡಾ। ಕೆ. ಪಿ. ಪುತ್ತೂರಾಯ**
ಅಧ್ಯಕ್ಷರು, ಅಖಿಲ ಭಾರತ ಬ್ರಾಹ್ಮಣ ಸಂಘಗಳ ಒಕ್ಕೂಟ

ಜಗತ್ತಿನಲ್ಲಿ ಧರ್ಮಕ್ಕೆ ಧಕ್ಕೆಯುಂಟಾದಾಗ, ಅಧರ್ಮವು ಹೆಚ್ಚಿದಾಗ ಧರ್ಮವನ್ನು ಮತ್ತೆ ಸಂಸ್ಥಾಪಿಸಲು ಭಗವಂತನು ಯುಗ ಯುಗಗಳಲ್ಲಿ, ನಾನಾ ಅವತಾರಗಳಲ್ಲಿ ಅವತರಿಸಿರುವ ವಿಷಯ ನಮಗೆಲ್ಲಾ ವೇದ್ಯವಾದುದು. ಇಂತಹ ಅವತಾರಗಳಲ್ಲಿ ದ್ವಾಪರಾಯುಗದಲ್ಲಿ ಭಗವಂತನು ಅವತರಿಸಿದ ಕೃಷ್ಣಾವತಾರವು ಬಹಳ ಶ್ರೇಷ್ಠವಾದುದು. ಕಾರಣ, ಈ ಅವತಾರದಲ್ಲಿ ಭಗವಂತನು ಅಧರ್ಮವನ್ನು ಸಂಪೂರ್ಣವಾಗಿ ನಾಶ ಮಾಡಿದ್ದೇ ಅಲ್ಲದೇ, ಎಲ್ಲರೂ ಸರ್ವಕಾಲದಲ್ಲೂ ಪಾಲಿಸಿ ಜೀವನ್ಮುಕ್ತಿಯನ್ನು ಪಡೆದುಕೊಳ್ಳಬಹುದಾದ ಧರ್ಮ ಸಂದೇಶವನ್ನೂ, ಜ್ಞಾನಾಮೃತವನ್ನೂ ಭಗವದ್ಗೀತೆಯ ಮೂಲಕ ನೀಡಿದ್ದಾನೆ. ಭಗವದ್ಗೀತೆಯಲ್ಲಿ ಪ್ರತಿಪಾದಿಸಿದ ಸಿದ್ಧಾಂತಗಳು, ಉಪದೇಶಗಳು, ಜ್ಞಾನ ಸಂದೇಶಗಳು ಮನುಕುಲ ಚರಿತ್ರೆಯಲ್ಲೇ ಅತಿ ಪವಿತ್ರವಾದುದು ಹಾಗೂ ಪ್ರಸಿದ್ಧವಾದುದು.

ಶ್ರೀ ಕೃಷ್ಣ ಪರಮಾತ್ಮನು ತನ್ನ ಅವತಾರದ ಅವಧಿಯಲ್ಲಿ ಬಾಲ್ಯದಿಂದಲೂ ಹತ್ತು ಹಲವಾರು ಲೀಲೆಗಳನ್ನೂ, ಪವಾಡಗಳನ್ನೂ ಮಾಡುತ್ತಲೆ ಬಂದಿದ್ದನು. ಇಂತಹ ಲೀಲೆಗಳು ಇಲ್ಲವೇ ಪವಾಡಗಳು ತಾನು ಪರಮಾತ್ಮ ಸ್ವರೂಪಿ ಎಂಬುದನ್ನು ಒಂದೆಡೆ ಖಚಿತಪಡಿಸಿಕೊಟ್ಟರೆ ಇನ್ನೊಂದೆಡೆ ಕಷ್ಟದುಃಖಗಳಲ್ಲಿ ದೂಡುತ್ತಿದ್ದ ಭಕ್ತರ ಸಂರಕ್ಷಣೆಯೂ ಗುರಿಯಾಗಿತ್ತು. ಇಂತಹ ಅದ್ಭುತ ಪವಾಡಗಳಲ್ಲಿ ಶ್ರೀಕೃಷ್ಣನು ಭಾರೀ ಧಾರಾಕಾರವಾಗಿ ಸುರಿದ ಮಳೆ ಮತ್ತು ಬಿರುಗಾಳಿಗಳಿಂದ ತತ್ತರಿಸಿದ ಜನರನ್ನು ಹಾಗೂ ಗೋವು ಮತ್ತು ಇತರೆ ಪ್ರಾಣಿಪಕ್ಷಿಗಳನ್ನು ರಕ್ಷಿಸಲು ಗೋವರ್ಧನ ಗಿರಿಯನ್ನೇ ತನ್ನ ಕಿರುಬೆರಳಿನಿಂದ ಎತ್ತಿ ಹಿಡಿದ ಪವಾಡವೂ ಒಂದು. ಏಳು ವರ್ಷದ ಬಾಲಕನಾಗಿದ್ದ ಶ್ರೀಕೃಷ್ಣನು ಮೇರು ಪರ್ವತವಾದ ಗೋವರ್ಧನ ಗಿರಿಯನ್ನು ಭೂಮಿಯಿಂದ ಕಿತ್ತು ತನ್ನ ಕಿರುಬೆರಳಿನಲ್ಲಿ ಅದೆಷ್ಟೋ ಕಾಲ ಎತ್ತಿ ಹಿಡಿದಿದ್ದರಲ್ಲಿ ಎರಡು ವಿಷಯಗಳು ಸ್ಪಷ್ಟವಾಗುತ್ತವೆ.

ಒಂದು ಕಷ್ಟದಲ್ಲಿ ಸಿಲುಕಿದ ಭಕ್ತರ ಗೋವು, ಗೋಪಾಲಕರು ಹಾಗೂ ಎಲ್ಲ ಪ್ರಾಣಿ ಪಕ್ಷಿಗಳ ರಕ್ಷಣೆ, ಎರಡು ಗೋವರ್ಧನ ಗಿರಿಯ ಅಹಂಕಾರದ ನಾಶ. ಇಂತಹ ಗೋವರ್ಧನ ಗಿರಿಧಾರಿಯಾದ ಶ್ರೀಕೃಷ್ಣನ ಚಿತ್ರಣವನ್ನು ನಾವುಗಳು ಕಲ್ಪನೆ ಮಾಡಿಕೊಂಡಿರಬಹುದು. ಇಲ್ಲವೇ ಚಿತ್ರಗಳ ಮೂಲಕ ನೋಡಿರಬಹುದು. ಆದರೆ ಗೋವರ್ಧನ ಗಿರಿಧಾರಿ ಶ್ರೀ ಕೃಷ್ಣನ ಮೂರ್ತಿಯ ಪ್ರತಿಷ್ಠಾಪನೆಗೊಂಡ

ನಂ. 2442, 9thಮೈನ್, 9ನೇ ಮುಖ್ಯರಸ್ತೆ, ಬನಶಂಕರಿ 2 ನೇ ಹಂತ, ಬೆಂಗಳೂರು - 560 070



ಒಂದು ಮಂದಿರದ ನಿರ್ಮಾಣ ಬಹುಶಃ ಯಾರಿಂದಲೂ ಇದುವರೆಗೆ ಆಗಿರಲಿಲ್ಲ.

ಇಂತಹ ಒಂದು ಅಭೂತಪೂರ್ವ ಸುಂದರ ಕಲ್ಪನೆಯ ಕನಸು ಕಂಡು ಆ ಕನಸನ್ನು ನನಸಾಗಿ ಸಾಕಾರಗೊಳಿಸಿದವರೆಂದರೆ ನಮ್ಮ ಪುತ್ತಿಗೆ ಮಠಾಧೀಶರಾದ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಮಹಾಸ್ವಾಮಿಗಳವರು.

ಉಡುಪಿಯಲ್ಲಿ ತಮ್ಮ ಪರ್ಯಾಯ ಕಾಲದಲ್ಲಿ ಅಮೃತಶಿಲೆಯಲ್ಲಿ ಗೀತ ಶ್ಲೋಕಗಳನ್ನು ಕೆತ್ತಿಸಿ ಶಾಶ್ವತವಾದ ಗೀತಾಮಂದಿರವನ್ನು ನಿರ್ಮಾಣ ಮಾಡಿದ್ದೇ ಅಲ್ಲದೆ ನೇಪಾಳದ ದೊರೆಯನ್ನು ಉಡುಪಿಗೆ ಆಮಂತ್ರಿಸಿ ಅವರ ಕೈಯಿಂದಲೇ ಈ ಮಂದಿರವನ್ನು ಉದ್ಘಾಟಿಸಿದ ಹೆಗ್ಗಳಿಕೆ ಇವರದು.

ಪುತ್ತಿಗೆ ಶ್ರೀಗಳು ಒಂದು ಸಾರ್ಥಕವಾದ ಜೀವನದ ಕನಸು ಕಂಡವರು. ಪರಿಣಾಮವಾಗಿ ಶ್ರೀಗಳು ಓರ್ವ ಕ್ರಾಂತಿಕಾರಿ ಯತಿಗಳ ಸಾಲಿಗೆ ಸೇರಿದರು. ಯತಿಗಳಾಗಿ ಯತಿಕುಲ ಧರ್ಮವನ್ನು ದೇಶದಲ್ಲಿರಲಿ, ವಿದೇಶದಲ್ಲಿರಲಿ ಅಕ್ಷರಶಃ ಪಾಲಿಸಿದವರು. ಓರ್ವ ಯತಿಗೆ ಇರಬೇಕಾದ ವೈರಾಗ್ಯ, ಜ್ಞಾನ, ಆಧ್ಯಾತ್ಮಿಕ ಹಾಗೂ ಧಾರ್ಮಿಕ ವಿಚಾರಗಳಲ್ಲಿ ಕಳಕಳಿ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ಸಕ್ರಿಯವಾಗಿ ಸ್ಪಂದಿಸುವ ಪ್ರಕ್ರಿಯೆ - ಎಲ್ಲವೂ ಶ್ರೀಗಳಲ್ಲಿ ಅಡಕವಾಗಿವೆ.

ತನ್ನ ಮನಸ್ಸು ಮತ್ತು ಇಂದ್ರಿಯಗಳ ಮೇಲೆ ಅಸಾಧಾರಣವಾದ ಹತೋಟಿಯನ್ನು ಸಾಧಿಸಿ ಅಭೂತಪೂರ್ವವಾದ ಲವಲವಿಕೆಯಿಂದ ಧರ್ಮ ಮತ್ತು ಜ್ಞಾನದ ಪ್ರಸಾರವನ್ನು ಶ್ರೀಗಳು ಮಾಡುತ್ತಲೇ ಬಂದಿರುತ್ತಾರೆ. ಅಂತೆಯೇ ಓರ್ವ ಗುರುವಾಗಿ ತನ್ನ ಶಿಷ್ಯಕೋಟಿಗೆ ಪಾಠ, ಪ್ರವಚನಗಳ ಮೂಲಕ, ಉಪದೇಶ, ಉಪನ್ಯಾಸಗಳ ಮೂಲಕ ಸದ್ವಿಚಾರಗಳನ್ನೂ ಧರ್ಮಶಾಸ್ತ್ರಗಳನ್ನೂ ಬೋಧಿಸಿ ಆದರ್ಶ ಗುರುಗಳೆನಿಸಿದ್ದಾರೆ.

ಅಂತೆಯೇ ಓರ್ವ ಮಠಾಧಿಪತಿಯಾಗಿ ಮಠದ ಎಲ್ಲ ಚಟುವಟಿಕೆಗಳನ್ನು ವಿಧವಿಧವಾದ ಕ್ಷೇತ್ರಗಳಲ್ಲಿ ವಿಸ್ತರಿಸಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಇವರು ಪ್ರತೀ ಮಾಸ ಹೊರ ತರುತ್ತಿರುವ 'ಸುಗುಣಮಾಲಾ' ಎಂಬ ಪತ್ರಿಕೆಯು ಅತ್ಯಂತ ಜನಪ್ರಿಯವಾದುದು. ಅಂತೆಯೇ ದೇಶ - ವಿದೇಶದ ಸಹಸ್ರಾರು ಭಕ್ತರಿಗೆ ವಿಷ್ಣು ಸಹಸ್ರನಾಮವನ್ನೂ, ಭಗವದ್ಗೀತೆಯನ್ನೂ ಉಪದೇಶಿಸಿ ಅವರುಗಳು ಉಚ್ಚರಿಸುವಂತೆ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ.

**ಒಟ್ಟಿನಲ್ಲಿ ಒಂದು ಸಂಪ್ರದಾಯಸ್ಥ ಸಮಾಜದಲ್ಲಿ ಯಾವುದಾದರೂ ರಚನಾತ್ಮಕ ಬದಲಾವಣೆಯನ್ನು ತರಬೇಕಿದ್ದರೆ ವಿಶೇಷವಾದ ಎದೆಗಾರಿಕೆ ಬೇಕು. ಇದನ್ನು ಮೈಗೂಡಿಸಿಕೊಂಡಿರುವ ನಮ್ಮ ಪುತ್ತಿಗೆ ಶ್ರೀಗಳು ನಿಜಕ್ಕೂ ಓರ್ವ ಕ್ರಾಂತಿಕಾರಿ ಯತಿಗಳೇ ಸರಿ.**

ಬೆಂಗಳೂರಿನ ಬಸವನಗುಡಿಯಲ್ಲಿ ಕಲ್ಲು ಬೆಟ್ಟವನ್ನು ಕೊರೆದು ನಿರ್ಮಿಸಿರುವ ಶ್ರೀ ಗೋವರ್ಧನ ಮಂದಿರ ನಮ್ಮ ಸಮಾಜದ ಆಸ್ತಿಕ ಬಂಧುಗಳಿಗೆ ಪುತ್ತಿಗೆ ಶ್ರೀಗಳು ನೀಡಿರುವ ಒಂದು ಅಪೂರ್ವ ಕೊಡುಗೆ. ಅಪರೂಪದ ಕಲ್ಪನೆಯಲ್ಲಿ ನಿರ್ಮಾಣಗೊಂಡಿರುವ ಈ ಮಂದಿರ ಭಕ್ತಾದಿಗಳಿಗೆ ಒಂದು ಅಪೂರ್ವ, ಪ್ರೇಕ್ಷಣೀಯ ಸ್ಥಳವಾಗುವುದರಲ್ಲಿ ಸಂಶಯವಿಲ್ಲ. ತನ್ಮೂಲಕ ಧರ್ಮದ ಪ್ರಸಾರವಾಗಿ ಭಗವಂತನ ಕೃಪೆ ಭಕ್ತಕೋಟಿಗೆ ಆಗುತ್ತಿರಲೆಂಬುದೇ ಶ್ರೀಗಳ ಸದುದ್ದೇಶ. ಇಂತಹ ಒಂದು ಪವಿತ್ರವಾದ ಹಾಗೂ ಪುಣ್ಯದ ಕಾರ್ಯದಲ್ಲಿ ನಾವೆಲ್ಲರೂ ಸಹಭಾಗಿಗಳಾಗಿ ಶ್ರೀಕೃಷ್ಣನ ಹಾಗೂ ಶ್ರೀಗಳ ಕೃಪೆಗೆ ಪಾತ್ರರಾಗೋಣ. ★

# ಪರಮಪೂಜ್ಯ ಶ್ರೀ ಶ್ರೀ ಸುಗುಣೇಂದ್ರತೀರ್ಥರಿಂದ ನಿರ್ಮಾಣಗೊಂಡ ಗೋವರ್ಧನ ಗಿರಿಯ ವರ್ಣನೆ

ರುಕ್ಮಿಣಿ ಗಿರಿಮಾಜಿ

ಇಷ್ಟು ದಿನ ಗೋಕುಲವು ಎಷ್ಟೋ
ದೂರದಲ್ಲಿತ್ತು
ಶ್ರೇಷ್ಠ ಯತಿವರರಿವರು ತಂದರಿದ ನಿಲ್ಲಿಗೆ ನೋಡು ॥ ಪ ॥

ಎಂತು ಅರಿತನೋ ಗಿರಿಧರನು ಭಕ್ತರಾಪೇಕ್ಷೆಯನು
ಸಂತ ಶ್ರೀ ಸುಗುಣೇಂದ್ರರೊಡಗೂಡಿ ಓಡೋಡಿ ಬಂದ ॥ ಅ. ಪ॥

ದೇಶ ವಿದೇಶವೆಂಬ ಬೇಧಭಾವವ ತೊರೆದು
ಶ್ರೀಶನೇ ಈ ಜಗದೊಡೆಯ ಹರಿಸರ್ವೋತ್ತಮನೆಂದು
ನಿತ್ಯ ಸತ್ಯವ ತಿಳಿಸಿ, ತತ್ವವಾದದ ಪ್ರಚುರ ಪಡಿಸಿ
ಭೃತ್ಯರು ಜೀವರುಗಳು ಜೀವೋತ್ತಮರುಮಾಕರಿಶ್ವರು ಎಂದು

ಪರಮಹಂಸಾಶ್ರಮದಿ - ಬಲು ನಿಷ್ಠರಿವರು
ಹೊರದೇಶಗಳಲು ತಮ್ಮ ನಿಷ್ಠೆಯನು ಬಿಡರು
ನೂರಾರು ವಿದ್ಯಾರ್ಥಿಗಳಿಗೆ ಅಶನ-ವಸನ-ವಸತಿ
ಕಾರುಣ್ಯದಲಿ ಕೊಟ್ಟು - ವಿದ್ವಾಂಸರನು ಬೆಳೆಸಿಹರು

ದ್ವಾಪರವನೆಳೆತಂದು ಕಲಿಯುಗದಿ ನಿಲಿಸಿ
ಶ್ರೀಪತಿಗಾಗಿ ಪರಮಾದ್ಭುತದ ದೇಗುಲವ ಕಟ್ಟಿಹರು
ಏನುಭವ್ಯವೋ ಸುಂದರದ ಮಂದಿರವು, ಬಂಡೆಗಳ
ಸಾನುರಾಗದಿ ಕಂಡರಸಿ ದಿವ್ಯ ಗುಹೆ ನಿರ್ಮಿಸಿಹರು

ಒಳಗೆ ಕಾಲಿಟ್ಟೊಡನೆ - ಬಲು ತಂಪು ಜೀವಕ್ಕೆ
ಒಳಗೊಳಗೆ ಗುಹೆ ಸುತ್ತಿ ಬರಲು ಬಲು ಚೆಂದ
ಬೆಳಕ ದೇಗುಲವು - ನಡು ಮಧ್ಯದಲಿ ನಿಂತಿಹನು
ಬೆಳಕ ಬಾಲಕನೊಬ್ಬ - ಗಿರಿಯೆತ್ತಿಹನು ಕಿರುಬೆರಳಿನಲಿ

ಬಂದೆಯಾ, ಬಾ ಕಂದ ಸ್ವಾಗತವು ಸುಸ್ವಾಗತವು ನಿನಗೆ
ಕಂದನೇ ಗಿರಿಯೆತ್ತಿ ನೊಂದಿತೇ ನಿನ್ನ ಪುಟ್ಟ ಬೆರಳು
ಈಗ ಅಲ್ಲಿರುವ ಗೋಕುಲವು ಬರಿ ಮಣ್ಣು ಧೂಳು
ಸೋಗಲಾಡಿಗಳವರು ಆ ದುಷ್ಟ ಪಂಡರು ಅಲ್ಲಿ

ಬಂದಿದ್ದು ಒಳಿತಾಯಿತು ನನ್ನಪ್ಪ - ಕಷ್ಟಪಟ್ಟಿಯೋ ಅಲ್ಲಿ
ಹಿಂಡು - ಹಿಂಡಾಗಿ ಬಂದರಲ್ಲಾ ಪೂತನಿ, ಶಕಟ, ಬಕರು
ಕೊಂದು ನಿನ್ನನು ಬರಲು -ಮಾವ ಕಂಸ ಕಳುಹಿದನವರ
ತಂದೆ ತಾಯಿಗೆ ಮೋದವಿತ್ತವರ ಯಮಪಟ್ಟಣಕೆ ಅಟ್ಟಿದೆ

ಒಂದೆ ಎರಡೆ ಕಾಟಗಳು ನಿನಗೆ ಗೋಕುಲದಲ್ಲಿ
ಬಂದ ಆ ಅಸುರರ ನಿರಾಯಾಸದಲಿ ಸಂಹರಿಸಿದೆ
ನದಿಯಲ್ಲಿ ಧುಮುಕಿ ದುಷ್ಟ ಕಾಳಿಂಗನನು ಮೆಟ್ಟಿದೆ
ಬದಿಯಲ್ಲಿ ಬಂದ ಕಾಳ್ಗಿಚ್ಚನ್ನು ನುಂಗಿದೆಯೊ ಹರಿ,

ಇಂದ್ರದೇವನು ನೀನು ಹರಿಯೆಂಬುದನು ಮರೆತನೆ ?
ತಂದೊದಗಿಸಿದ ಘೋರ ಮಳೆಯ, ಗುಡುಗು ಸಿಡಿಲುಗಳ
ಮತ್ತೆ ಬಂದರು ಗೋಕುಲದ ಪ್ರಜರೆಲ್ಲ ನೀನೆ ಗತಿಯೆಂದು
'ಪುತ್ರನೇ ಸಲಹಯ್ಯಾ' ಎನಲು ಗಿರಿಯನೆತ್ತಿದೆ ಪೋರ

ದೂರಿದರು ಇಷ್ಟಾದರೂ ಜರಿದರು 'ಜಾರ ಚೋರನೆಂದರು'
ನಾರಿಯರು, ಗೋಪಿಯರು ಬಲು ಮೋಸದಾ ಜನರು,
ಆದರೂ ನೀನವರ ಬಿಡದೆ ಸಲಹುತಲಿದ್ದೆಯೋ
ಮೋದದಲಿ ಮುರಲಿಯನು ನುಡಿಸಿ ನಟಿಸುತಲಿದ್ದೆ

ಚಿಣ್ಣ ನಿನಗಿಲ್ಲಿ ದಿನನಿತ್ಯ ಹಾಲ್ಬೆಣ್ಣೆ ದೊರಕುವುದು
ಚೆನ್ನೆಯರು ಭಜನೆಯನು ಮಾಡುವರು ಪ್ರತಿನಿತ್ಯ
ಬೇಕಾದಷ್ಟು, ಚಕ್ಕುಲಿ, ಉಂಡೆ, ನಾನಾಭಕ್ಷ್ಯಗಳಿಹವು
ಸಾಕಾಗುವಷ್ಟು ಜರಿವಸ್ತ್ರ ಒಡವೆಗಳ ತೊಡಿಸುವೆವು.

ಶಿಷ್ಟ ಪರಿಪಾಲನೆಯ ಮಾಡಯ್ಯ ನೀನಿಲ್ಲಿ
ದುಷ್ಟರಿಹರಯ್ಯ ಚೋರ - ಕೊಲೆ ಪಾತಕರು - ರಕ್ಷಿಸೋ
ಜಯವು ನಿನಗಕ್ಕೆ - ಹಿರಿಯಗುರು - ವಿಶ್ವೇಶರಿಗೆ
ಜಯವು ಸುಗುಣೇಂದ್ರರಿಗೆ ಜನಪದಕೆ ರುಕ್ಮಿಣೀವರದನೇ.

296, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಗೋಕುಲ I ಹಂತ, II ಘಟ್ಟ, ಬೆಂಗಳೂರು - 560 054

Ph.: 2523504
**INTERIORS & FURNITURE**
**Opp. : Sanskrit College, Maruthi Veethika, Udupi - 576 101**
*Specialists in :* • Interior Decoration work and Furnishings.
• Steel & Wooden Furniture. • Sofa sets of different designs
• Computer Furniture and chairs of different Designs
• Kurlon & Duroflex Mattress and many more.

*With Best Compliments from :*
**LAXMIDAS JEWELLERS**
"Megha Building" Balmatta Road,
Mangalore - 575 001.
**Phone : 2426060, 2421760**

ಶ್ರೀಮದನುವ್ಯಾಖ್ಯಾನ ಅನುಸಂಧಾನಪೂರ್ವಕ

# ಶ್ರೀ ಸು ಧಾ ಸು ವ ಚ ನ

ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು

ಲೇಖಾಂಕ -29 ಮೊಕ್ಕಾಂ: ಬೆಂಗಳೂರು

"ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ" ಎಂದಂತೆ ಹಾಗೆಯೇ 'ಪುನರಪಿ ಜನನಂ ಪುನರಪಿ ಮರಣಂ' ಎಂಬಂತೆ ಉದ್‌ಭವ ನಾಶಗಳು ತುದಿ ಮೊದಲಿಲ್ಲದ ನಿತ್ಯ ಚಕ್ರವಾಗಿರುವಾಗ ಉದ್‌ಭವಾದಿ ಎಂದು ಉದ್‌ಭವವನ್ನೇ ಯಾಕೆ ಆದಿಯಾಗಿ ಮತ್ತು ಕಂಠತಃ ಉತ್‌ಕೀರ್ತನೆ ಮಾಡಿದ್ದು ಎಂಬುದೊಂದು ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ.

ಭಾಗವತ ತೃತೀಯ ಸ್ಕಂಧದಲ್ಲಿ ಹೇಳಿದಂತೆ ನದೀ ಸುಳಿಗಳಲ್ಲಿ ಇದು ಮೊದಲು ಇದು ನಂತರದ್ದು ಎಂದು ಗುರುತಿಸಲು ಸಾಧ್ಯವಿಲ್ಲದಂತೆ, ಹುಣ್ಣಿಮೆ ಅಮಾವಾಸ್ಯೆಗಳಲ್ಲಿ ಇದಂಪ್ರಾಥಮ್ಯವನ್ನು ಐದಂಪರ್ಯವನ್ನು ಸ್ಥಾಪಿಸಲು ಸಾಧ್ಯವಿಲ್ಲದಂತೆ ಹುಟ್ಟುಸಾವುಗಳ ಒಟ್ಟು ಪರಿಗಣನೆಯಲ್ಲಿ ಮೊಟ್ಟಮೊದಲಿದ್ದು ಹುಟ್ಟು ಎಂದು ಪರಿಗಣನೆ ಹೇಗೆ ಸಾಧ್ಯ? ಹೀಗಿರುವಾಗ ಉದ್‌ಭವಾದಿ ಎಂದು ಉದ್‌ಭವವನ್ನು ಸ್ವಶಬ್ದದಿಂದ ಉತ್‌ಕೀರ್ತಿಸಿ ಸ್ಥಿತ್ಯಾದಿಗಳನ್ನು ಆದಿಕೋಟಿಯಲ್ಲಿ ಸೇರಿಸಿದ್ದು ಹೇಗೆ ಉಚಿತ ಎಂದು ಪ್ರಶ್ನೆ ಉದ್ಭವವಾಗುತ್ತದೆ.

ಹಾಗೆ ನೋಡಿದರೆ ಉದ್‌ಭವನಾಶಾದಿ ಎಲ್ಲಕ್ಕಿಂತ ಮುಖ್ಯವಾದದ್ದು ಸ್ಥಿತಿ. ಯಾರಿಗಾದರೂ ಪೂರ್ವಭಾವೀ ಸ್ಥಿತಿ ಇಲ್ಲದಿದ್ದರೆ ಉದ್‌ಭವ ನಾಶಗಳ ಉದ್‌ಭವವೇ ಅಸಂಭವ. ಇಲ್ಲದ ತಂದೆ ತಾಯಿಗಳಿಂದ ಇರುವ ಮಗು ಹುಟ್ಟಲು ಸಾಧ್ಯವೇ? ಸೃಷ್ಟಿಕಾರಕನೆಂದೆನಿಸಿದ ಚತುರ್ಮುಖನಿಗೂ ಪಂಚತ್ವಕಾರಕನೆಂದೆನಿಸಿದ ಪಂಚಮುಖನಿಗೂ ಮೂಲ, ಸ್ಥಿತಿಕಾರಕನಾದ ಮಹಾವಿಷ್ಣುವೇ ಆಗಿರುವಾಗ ವಿಷ್ಣು ಸರ್ವೋತ್ತಮತ್ವ ಪ್ರತಿಬಿಂಬಿಸಲು ಅಸ್ಯ ಸ್ಥಿತ್ಯಾದಿದಂ ಎನ್ನುವುದೇ ಸೂಕ್ತವಲ್ಲವೇ? ಆದ್ದರಿಂದ ಸ್ಥಿತಿಗೆ ಪ್ರಥಮ ಸ್ಥಿತಿ ನ್ಯಾಯಪಾತ್ರವಾದದ್ದು ಸಲ್ಲಬೇಕಾಗುತ್ತದೆ. ಅದನ್ನು ಆದಿಕೋಟಿಯಲ್ಲಿ ಸೇರಿಸಿದ್ದರಿಂದ ಸ್ಥಿತಿಗೆ ಅನ್ಯಾಯವಾಯಿತಲ್ಲಾ? ಅವಮಾನವಾಯಿತಲ್ಲಾ ಎಂದು ಸ್ಥಿತಿಪಕ್ಷದವರಿಂದ ಆಕ್ಷೇಪ



ಅನಿವಾರ್ಯವಾಗುತ್ತದಲ್ಲವೇ? ಮೊದಲು ಬಂದವನಿಗೆ ಭಡ್ತಿ ಕೊಡದೆ ನಂತರ ಬಂದವನಿಗೆ ಭಡ್ತಿ ನೀಡಿದರೆ ಮೊದಲು ಬಂದವನಿಗೆ ಅವಮಾನವಾಗುವುದಿಲ್ಲವಾ ಎಂಬುದಾಗಿ ಮಗದೊಂದು ಪ್ರಶ್ನೆ ಇಲ್ಲಿ ಉದ್‌ಭವವಾಗುತ್ತದೆ.

ಈ ಮಧ್ಯೆ ಹುಟ್ಟು ಆಕಸ್ಮಿಕ, ಅದಕ್ಕಷ್ಟು ಮಹತ್ವ ನೀಡಬಾರದು. ಬದುಕು ಅರ್ಥಾತ್ ಸ್ಥಿತಿ ವ್ಯಕ್ತಿತ್ವದ್ಯೋತಕ. ಅದನ್ನು ಪ್ರಧಾನವಾಗಿ ಪರಿಗಣಿಸತಕ್ಕದ್ದು. ಹೀಗೆ ಹುಟ್ಟಿಕ್ಕಿಂತ ಬದುಕು ಮುಖ್ಯ ಆದ್ದರಿಂದ ಸ್ಥಿತಿಮುಖ್ಯ ಎಂಬ ವಾದವೂ ಇದರ ಜೊತೆಗೆ ಸೇರಿಕೊಂಡು ಅಸ್ಯ ಸ್ಥಿತ್ಯಾದಿದಂ ಎಂದೇ ಹೇಳಬೇಕಿತ್ತು ಎಂಬ ಪ್ರಶ್ನೆ ಮತ್ತಷ್ಟು ಬಲಗೊಳ್ಳುವುದಿದೆ.

ಹೀಗೆ ಪ್ರಶ್ನೆ ಬಲಗೊಳ್ಳುತ್ತಿರುವಾಗ ಇದರಿಂದ ಒಮ್ಮೆಗೆ ತಪ್ಪಿಸಿಕೊಳ್ಳಲು ಉದ್‌ಭವಾದಿದಂ ಎಂಬಲ್ಲಿ ಆದಿಪದದಿಂದ ಆಚಾರ್ಯರು ಸ್ಥಿತ್ಯಾದಿಗಳನ್ನು ಸ್ವೀಕರಿಸಿದ್ದಲ್ಲ. ಆದಿಪದದಿಂದಲೂ ಉದ್‌ಭವವನ್ನೇ ಸ್ವೀಕರಿಸಿದ್ದು. ಉದ್‌ಭವಾದಿದಂ ಪದದ ತಾತ್ಪರ್ಯವೇನೆಂದರೆ ಉದ್‌ಭವ ಮತ್ತು ಉದ್‌ಭವವೇ ಆದಿಯಾಗಿವುಳ್ಳ, ಆ ಉದ್‌ಭವದ ಉದ್‌ಭವ, ಆ ಉದ್‌ಭವದ ಉದ್‌ಭವದ ಉದ್‌ಭವ ಹೀಗೆ ಉದ್‌ಭವದ ಪರಂಪರೆಯನ್ನು ಕೊಡುವವ ಅವ ಎಂದು ಇಲ್ಲಿಯ ಭಾವ. ಹಾಗಿರುವಾಗ ಸ್ಥಿತ್ಯಾದಿಗಳಿಗೆ ಅವಮಾನ ಮಾಡಿದರು ಎಂಬ ವಿಷ್ಣುವಾದಿಗಳ ಆಕ್ಷೇಪಕ್ಕೆ ಎಡೆಯೇ ಇಲ್ಲ ಎಂದು ಸಮಜಾಯಿಸಿಕೆ ನೀಡಬಹುದು.

ಹೌದು ಒಮ್ಮೆಗೆ ಬಾಯಿಕಟ್ಟಿಸಲು ಈ ಉತ್ತರದ ಹುಟ್ಟು ಚೆಂದವಾಗಬಹುದು. ಆದರೆ ಇದು ಆಚಾರ್ಯರಿಗೆ ಸಮ್ಮತವೆನಿಸದು. ಯಾಕೆಂದರೆ ಒಂದನೆಯದಾಗಿ 'ಜನೇರನ್ಯಾ ಜನಿರ್ನಾಸ್ತಿ' ಎಂದಿರುವಾಗ ಹೇಗೆ ಸ್ಥಿತಿಯ ಸ್ಥಿತಿಯೇ ಸ್ಥಿತಿಯ ಸ್ಥಿತಿಯಾಗಿರುತ್ತದೊ ಹಾಗೆ ಹುಟ್ಟಿನ ಹುಟ್ಟೇ ಹುಟ್ಟಿನ ಹುಟ್ಟಾಗಿರುವಾಗ ಹುಟ್ಟಿಗೊಂದು ಹುಟ್ಟು ಹೇಗೆ? ಆ ಪರಂಪರೆ ಹೇಗೆ ಎಂಬ ಪ್ರಶ್ನೆಯನ್ನು ನಿಭಾಯಿಸಲು ಈ ವ್ಯಾಖ್ಯಾನಕಾರರಿಗೆ ಸಾಧ್ಯವಿಲ್ಲ. ಎರಡನೆಯದಾಗಿ ಈ ರೀತಿ ವ್ಯಾಖ್ಯಾನ ಅಸಹಜ ಮಾತ್ರವಲ್ಲ ಪೂರ್ವ ವ್ಯಾಖ್ಯಾನಕ್ಕಿಂತ ಇದು ಅರ್ಥ ವಿಸ್ತಾರವನ್ನು ಕುಂಠಿತಗೊಳಿಸುವುದರಿಂದ, ಪರಿಮಿತಗೊಳಿಸುವುದರಿಂದ ಅಷ್ಟು ಆಪ್ಯಾಯಮಾನವಾಗಲು ಸಾಧ್ಯವಿಲ್ಲ. ಆದ್ದರಿಂದ ಉದ್‌ಭವಾದಿ ಎಂಬಲ್ಲಿ ಸ್ಥಿತ್ಯಾದಿ ಎಂದೇ ಹೇಳಬೇಕಾಗಿತ್ತಲ್ಲಾ ಎಂಬ ಪೂರ್ವಪ್ರಶ್ನೆ ಮೊದಲಿನಂತೆಯೆ

ಬಲಿಷ್ಠವಾಗಿಯೇ ಉಳಿದುಬಿಡುತ್ತದೆ.

ಈ ಮಧ್ಯೆ ಈ ಪ್ರಶ್ನೆಗೆ ಮತ್ತೊಂದು ಬುದ್ಧಿವಂತಿಕೆಯ ಉತ್ತರವೂ ಇಲ್ಲಿ ಹೊಳೆಯುತ್ತದೆ. ಅದೇನೆಂದರೆ ಉದ್‌ಭವ ಶಬ್ದಕ್ಕೇನೆ ಸ್ಥಿತಿ ಎಂದು ಅರ್ಥ ಹಚ್ಚಿಬಿಡುವುದು. ಹೇಗಿದ್ದರೂ ಉದ್‌ಭವ ಶಬ್ದದ ಉದ್‌ಭವವಾದದ್ದು ಭೂ ಸತ್ತಾಯಾಂ ಎಂಬ ಧಾತುವಿನಿಂದ. ಆದ್ದರಿಂದ ಉದ್‌ಭವ ಎಂದರೆ ಉತ್‌ಸತ್ತಾ ಉತ್‌ಸ್ಥಿತಿ ಎಂಬ ಅರ್ಥವನ್ನು ಇಟ್ಟುಕೊಂಡರೆ ಹಿಂದಿನ ತಕರಾರೇ ಮಾಯವಾಗುತ್ತದಲ್ಲಾ ಎಂದು. ಮತ್ತೂ ಕೂಡ ಭವಶಬ್ದಕ್ಕೆ ಹುಟ್ಟು ಎಂದು ಅರ್ಥಮಾಡಿ ಅದಕ್ಕಿಂತ ಮುಖ್ಯವಾದ ಸ್ಥಿತಿಗೆ ಉದ್‌ಭವ ಎಂದು ಹೆಸರಿಸಿದರೆ ಪ್ರಶ್ನೆಕಾರರ ಆಶಯವನ್ನೇ ಪ್ರತಿಬಿಂಬಿಸಿದ ಹಾಗೆ ಆಗುತ್ತದೆ. ಆದ್ದರಿಂದ ಇದು ಒಳ್ಳೆಯ ಉತ್ತರ. ಉತ್ತಮ ಉತ್ತರ. ಉತ್ಕೃಷ್ಟ ಉತ್ತರ ಎಂದು.

ಈ ರೀತಿ ಉದ್‌ಭವಾದಿ ಶಬ್ದಕ್ಕೆ ಸ್ಥಿತ್ಯಾದಿ ಎಂದು ಅರ್ಥ ಮಾಡುವಾಗ ಹುಟ್ಟನ್ನು ಕೈಬಿಟ್ಟಂತಾಗುತ್ತದಲ್ಲಾ ಎಂದು ಬ್ರಹ್ಮವಾದಿಗಳಿಗೆ ಬೇಸರವಾಗುವುದಾದರೆ ಉದ್‌ಭವವನ್ನು ಉದ್‌ಭವ ಶಬ್ದದಿಂದ ತೆಗೆದುಕೊಳ್ಳೋಣ. ಮತ್ತು ನಾಶವನ್ನು ಕೂಡ ಉದ್‌ಭವ ಶಬ್ದದಿಂದ ತೆಗೆದುಕೊಂಡರೆ ರುದ್ರವಾದಿಗಳ ಬೇಸರವನ್ನು ತಣಿಸಬಹುದು. ಅದು ಹೇಗೆಂದರೆ ನಾಶ ಅದೂ ಉದ್‌ಭವವೇ ಅಲ್ಲವೇ? ಅಂದರೆ ಉತ್‌ಸ್ಥಿತಿಯೇ ಅಲ್ಲವೇ? ಈ ರೀತಿ ಅರ್ಥ ಇಟ್ಟುಕೊಂಡಾಗ ಸ್ಥಿತ್ಯಾದಿ ಎಂದು ಹೇಳಬೇಕಿತ್ತಲ್ವಾ? ಎಂಬ ಪ್ರಶ್ನೆಯೇ ಹುಟ್ಟುವುದಿಲ್ಲ ಎಂದು ಪ್ರಶ್ನೆಯ ಹುಟ್ಟನ್ನೇ ಅಡಗಿಸಿಡುವ ಬುದ್ಧಿವಂತಿಕೆಯ ಉತ್ತರ ಇಲ್ಲಿ ಭಾಸವಾಗುತ್ತದೆ.

ಆದರೆ ಈ ರೀತಿ ಬುದ್ಧಿವಂತಿಕೆಯ ಅರ್ಥ ಹಚ್ಚಿದರೆ ಆ ಬುದ್ಧಿವಂತಿಕೆಯೇ ಮುಳುವಾಗಿ ಆದಿಪದಕ್ಕೆ ಅರ್ಥವೇ ಉಳಿಯದೇ ಅದು ವ್ಯರ್ಥವಾಗಿ ಉಳಿಯುವ ಸಂಭವ ಬರುತ್ತದೆ. ಯಾಕೆಂದರೆ ಉದ್‌ಭವ ಶಬ್ದಕ್ಕೆ ಉತ್‌ಸ್ಥಿತಿ ಎಂದು ಅರ್ಥ ಮಾಡಿ ಸ್ಥಿತಿ ಲಯಗಳನ್ನು ತೆಗೆದುಕೊಂಡಂತೆ ಉಳಿದುದನ್ನು ತೆಗೆದು ಕೊಳ್ಳಬಹುದಲ್ವಾ ಎಂಬ ಬುದ್ಧಿವಂತಿಕೆಯ ಪ್ರಶ್ನೆಯನ್ನು ತಡೆಯಲು ಹೇಗೆ ಸಾಧ್ಯ? ಹಾಗೆ ತೆಗೆದುಕೊಂಡಾಗ ಆದಿಪದಕ್ಕೆ ಯಾವ ಅರ್ಥ ಉಳಿದಿರುತ್ತದೆ? ಆದ್ದರಿಂದ ಆ ರೀತಿ ಚಮತ್ಕಾರದ ಅರ್ಥಕ್ಕೆ ನಮಸ್ಕಾರ ಹೇಳುವುದೇ ಉತ್ತಮವಾದ್ದರಿಂದ 'ಉದ್ಭವಾದಿದಂ' ಶಬ್ದಕ್ಕೆ ಸಹಜವಾಗಿಯೇ ಸೃಷ್ಟ್ಯಾದಿ ಕರ್ತಾ ಎಂಬ ಅರ್ಥವನ್ನು ಪರಿಗಣಿಸುವುದೇ ಉತ್ತಮವೆನಿಸುತ್ತದೆ. ಆದಾಗ ಹಿಂದೆ ಬಂದ ಸ್ಥಿತ್ಯಾದಿ ಎಂದು ಹೇಳಬೇಕಾಗಿತ್ತಲ್ವಾ ಎಂಬ ಪ್ರಶ್ನೆ ಪುನಃ ಹಾಗೆಯೇ ಉಳಿದಿರುತ್ತದಲ್ವಾ ಎಂಬ ಸಮಸ್ಯೆ ಮುಂಬರುತ್ತದೆ.

ಈ ಸಮಸ್ಯೆ ಪರಿಹಾರವಾಗಬೇಕಾದರೆ 'ತತ್ತ್ವಪ್ರಕಾಶಿಕಾ' ಟೀಕೆಯಲ್ಲಿ 'ಲಬ್ಧ ಜನ್ಮನಃ ಸ್ಥಿತ್ಯಾದಿ' ಎಂದು ಏನು ಹುಟ್ಟಿಗೆ ಪ್ರಾಶಸ್ತ್ಯವನ್ನು ಹೇಳಿದ್ದಾರೋ ಅದನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು. ಈ ಹಿನ್ನಲೆಯಲ್ಲಿ ವಿಮರ್ಶಿಸುವಾಗ ಸ್ಥಿತಿ ಮುಖ್ಯ ಎಂದು ಎಷ್ಟೇ ವಾದಿಸಿದರೂ ಹುಟ್ಟಿದ್ದಕ್ಕೆ ತಾನೇ ಸ್ಥಿತಿ ಪ್ರತಿಪಾದನೆ ಮಾಡುವುದು? ಹುಟ್ಟದೇನೇ ಇದ್ದರೆ, ಅದರ ಇರುವಿಕೆ ಎಂತು ಬಂತು? ಆದ್ದರಿಂದ ಹುಟ್ಟಿನ ಹಿರಿಮೆ ಅದು ಹುಟ್ಟಿನ ಹುಟ್ಟು ಗುಣ. ಸ್ಥಿತಿಕ್ಕಿಂತ ಹೆಚ್ಚು.

ಪ್ರಶ್ನೆಕಾರರು ಒಂದು ವಸ್ತುವಿನ ಹುಟ್ಟಿಗೆ ಇನ್ನೊಂದು ವಸ್ತುವಿನ ಪೂರ್ವಸ್ಥಿತಿಯನ್ನು ಸಮರ್ಥಿಸಿದ್ದಾರೆ. ಆದರೆ ಆ ವಸ್ತುವಿನ ಮಟ್ಟಿಗೆ ಮಾತ್ರ ಆಲೋಚಿಸಿದರೆ ಅದಕ್ಕೆ ಸ್ಥಿತಿಗಿಂತ ಹುಟ್ಟೇ ಮೊದಲಲ್ಲವೇ? ಹುಟ್ಟೇ ಮುಖ್ಯವಲ್ಲವೇ? ಈ ಅರ್ಥವನ್ನು ಮನಸ್ಸಿನಲ್ಲಿಟ್ಟು 'ಅಸ್ಯೋದ್‌ಭವಾದಿದಂ' ಎಂಬುದಕ್ಕೆ ದೃಷ್ಟಿ ಹಾಯಿಸಿದಾಗ ಅಲ್ಲಿಯ 'ಅಸ್ಯ' ಎದುರಿಗಿರುವ ವಸ್ತುವಿನ ದೃಷ್ಟಿಯಿಂದ ಎಂಬ ಹೊಸ ಅರ್ಥವನ್ನು ಹೊಳೆಸುವುದರೊಂದಿಗೆ ಮತ್ತಷ್ಟು ಅರ್ಥಗರ್ಭಿತವಾಗಿ ಕಾಣುತ್ತದಲ್ಲವೇ?

ಪ್ರಶ್ನೆಕಾರರು ಹುಟ್ಟಿಗಿಂತ ಸ್ಥಿತಿ ವ್ಯಕ್ತಿತ್ವ ದ್ಯೋತಕವಾದದ್ದರಿಂದ ಸ್ಥಿತಿ ಶ್ರೇಷ್ಠ ಎಂದಿದ್ದಾರೆ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಹುಟ್ಟು ಮೊಟ್ಟಮೊದಲ ವ್ಯಕ್ತಿತ್ವ ದ್ಯೋತಕ ಮತ್ತು ಮಾಪಕ ಕೂಡಾ. ಆದ್ದರಿಂದಲೇ ಹುಟ್ಟುಗುಣ ಬೆಟ್ಟಹತ್ತಿದರೂ ಬಿಡದು ಎಂದು ಬಂದು ಬಿದ್ದದ್ದು.

ಹಾಗಿದ್ದರೆ ಸ್ಥಿತಿಯ ಸ್ಥಾನವನ್ನು ತಗ್ಗಿಸಿದರೆ ಕಡಿಮೆ ಮಾಡಿದರೆ ಸ್ಥಿತಿಕಾರಕ ಮಹಾವಿಷ್ಣುವಿನ ಸರ್ವೋತ್ತಮತ್ತ್ವಕ್ಕೆ ಚ್ಯುತಿ ಬಂದಂತಾಯಿತಲ್ಲವೇ? ಎಂಬ ಪೆದ್ದು ಪ್ರಶ್ನೆ ಎದ್ದು ಬರಬಹುದು. ಆದರೆ ಸರ್ವೋತ್ತಮತ್ತ್ವವನ್ನು ಕೇವಲ ಸ್ಥಿತಿಕಾರಕತ್ವಕ್ಕೆ ನೀವು ಇಳಿಸಿದ್ದು ಸೀಮಿತಗೊಳಿಸಿದ್ದು ಯಾತಕ್ಕೆ ಎಂದು ಅವರಿಗೇ ಮರುಪ್ರಶ್ನೆ ಮಾಡಿದರೆ ಆ ಪೆದ್ದು ಪ್ರಶ್ನೆ ಅಲ್ಲಿಗೇ ಸದ್ದಿಲ್ಲದೆ ಮಾಯವಾಗುತ್ತದೆ. ಹಾಗೇನಾದರೂ ಈ ಪ್ರಶ್ನೆಗೆ ಆಚಾರ್ಯರೇ ಉತ್ತರ ಕೊಡಬೇಕೆಂದು ಹಠ ಮಾಡಿದರೆ ಅಸ್ಯ ಎಂಬುದಕ್ಕೆ ಹುಟ್ಟುಕಾರಕನಾದ ಚತುರ್ಮುಖ ಬ್ರಹ್ಮನಿಗೆ ಎಂದು

ಅರ್ಥಹಚ್ಚಿದರಾಯ್ತು.

ಆದ್ದರಿಂದ ತತ್ತ್ವ ಪ್ರಕಾಶಿಕಾ ಟೀಕೆ ಹೇಳಿದಂತೆ 'ಲಬ್ದ ಜನ್ಮನಃ ಸ್ಥಿತ್ಯಾದಿ' ಎಂದು ಉದ್‌ಭವಕ್ಕಿರುವ ಸಹಜ ಪ್ರಾಥಮ್ಯವನ್ನು ಇಟ್ಟುಕೊಂಡು ಇಲ್ಲಿ ಆಚಾರ್ಯರು ಸ್ಥಿತ್ಯಾದಿ ಎನ್ನದೆ ಉದ್‌ಭವಾದಿದಂ ಎಂದದ್ದು ಎಂದು ತಿಳಿಯತಕ್ಕದ್ದಾಗಿರುತ್ತದೆ.

ಇಷ್ಟಾದರೂ ಇಲ್ಲಿ ಮತ್ತೊಂದು ಪ್ರಶ್ನೆ ಬರುತ್ತದೆ. ಆದೇನೆಂದರೆ ಪ್ರಕೃತಿಗೆ ಪರಿಣಾಮ, ಆಕಾಶಕ್ಕೆ ಮೂರ್ತ ಸಂಯೋಗ, ಜೀವನಿಗೆ ದೇಹ ಲಾಭ, ಲಕ್ಷ್ಮೀದೇವಿಗೆ ಸಿಸೃಕ್ಷುತ್ವ ಇದೇ ಮೊದಲಾದ ಉತ್ಪತ್ತಿಯು ಸ್ಥಿತಿಗಿಂತ ಪೂರ್ವ ಭಾವಿಯಲ್ಲವಾದ್ದರಿಂದ ಲಬ್ದ ಜನ್ಮನಃ ಸ್ಥಿತ್ಯಾದಿ ಎಂದದ್ದು ಹೇಗೆ? ಎಂದು.

ಸರಿ ಅದು ಹೌದಾದರೂ ಜಗತ್ತಿನಲ್ಲಿ ಸ್ವರೂಪ ಲಾಭ ರೂಪ ಉತ್ಪತ್ತಿಯು ಬಹುಪದಾರ್ಥಗಳಿಗಿದೆ. ಪರಿಣಾಮ ಮೂರ್ತಸಂಯೋಗ ಮೊದಲಾದ ಉತ್ಪತ್ತಿಯು ಕೆಲವು ಪದಾರ್ಥಗಳಿಗೆ ಮಾತ್ರ. ಸ್ವರೂಪ ಲಾಭರೂಪ ಉದ್‌ಭವವು ಬಹುಪದಾರ್ಥ ಸಂಬಂಧಿಯಾದ್ದರಿಂದ ಅಂತಹ ಜನ್ಮವನ್ನು ವಿವಕ್ಷಿಸಿ 'ಲಬ್ದ ಜನ್ಮನಃ ಸ್ಥಿತ್ಯಾದಿ" ಎಂದ ಟೀಕೆಯು ಹೊರಟದ್ದು ಪ್ರಾಯಿಕತ್ವ ವಿವಕ್ಷೆಯಿಂದ. ಅದನ್ನೇ ಆಚಾರ್ಯರೂ ಕೂಡ ಎತ್ತಿಹಿಡಿದದ್ದು.

ನೆನಪಿಟ್ಟುಕೊಳ್ಳಿ, ಆಚಾರ್ಯರು ಬಹುವಚನವುಳ್ಳ ಬಹುಮತಕ್ಕೆ ಬೆಲೆ ಕೊಡುವ ಬಹುಗುಣ ಭರಿತರು. ಆದ್ದರಿಂದ ಬಹುಪದಾರ್ಥ ಸಂಬಂಧಿಯಾದ ಉದ್‌ಭವನ್ನೇ ಉದ್‌ಭವಾದಿದಂ ಎಂದು ಎತ್ತಿ ಹಿಡಿದರು.

(ಮುಂದುವರಿಯುವುದು)

ಸಮಾಚಾರ ಸಂಗ್ರಹ

## ಹಸ್ತ ಪ್ರತಿಗಳ ಸಂಶೋಧನೆಗೆ ನೂತನ ಸಂಶೋಧನಾ ಮಂದಿರ: ಪುತ್ತಿಗೆ ಶ್ರೀಗಳು



ಪ್ರಾಚೀನ ಹಸ್ತ ಪ್ರತಿಗಳನ್ನು ಸಂಶೋಧಿಸುವ ಉದ್ದೇಶದಿಂದ ಅತಿ ಶೀಘ್ರ ಪುತ್ತಿಗೆಯ ಮೂಲ ಮಠದ ಆವರಣದಲ್ಲಿ ತಿರುಪತಿಯ ರಾಷ್ಟ್ರೀಯ ಸಂಸ್ಕೃತ ಪ್ರತಿಷ್ಠಾನದ ಸಹಕಾರದೊಂದಿಗೆ ಸಂಶೋಧನಾ ಮಂದಿರವನ್ನು ನಿರ್ಮಿಸಲಾಗುವುದು ಎಂದು ಪುತ್ತಿಗೆ ಮಠದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ತಿಳಿಸಿದರು. ಅವರು ಪುತ್ತಿಗೆಯ ಮೂಲ ಮಠದಲ್ಲಿ ದಿನಾಂಕ 10-7-2004ನೇ ಶನಿವಾರ ಮೈಸೂರು ವಿ. ವಿ. ಅವರ ಪ್ರಾಚ್ಯ ವಿದ್ಯಾ ಸಂಶೋಧನಾಲಯದವರು ಹಸ್ತ ಪ್ರತಿಗಳನ್ನು ಸಂರಕ್ಷಿಸುವ ಬಗ್ಗೆ ನಡೆಸಿಕೊಟ್ಟ ಒಂದು ದಿನದ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಿ ಆಶೀರ್ವಚನಗೈದರು.

ವಿದೇಶಗಳ ಹೆಚ್ಚಿನ ವಿಶ್ವ ವಿದ್ಯಾಲಯಗಳಲ್ಲಿ ಹಸ್ತಪ್ರತಿಗಳಿಗೆ ವಿಶೇಷ ಮಾನ್ಯತೆ ಇದೆ ಮಾತ್ರವಲ್ಲ ದೊರೆತ ಹಸ್ತಪ್ರತಿಗಳನ್ನು ಅತ್ಯಂತ ಜಾಗರೂಕತೆಯಿಂದ ಸಂರಕ್ಷಿಸುವ ಆಸಕ್ತಿ ಇದೆ. ಅದೇ ರೀತಿ ಭಾರತದಲ್ಲಿಯೂ ಈ ಪ್ರಾಚೀನ ಹಸ್ತಪ್ರತಿಗಳನ್ನು ಜೋಪಾಸನೆ ಮಾಡುವ ವೈಜ್ಞಾನಿಕ ವಿಧಾನವನ್ನು ಅರಿಯಬೇಕು ಎಂದು ತಿಳಿಸಿದ ಶ್ರೀಪಾದರು, ಕೇವಲ 200 ವರ್ಷಗಳ ಹಿಂದೆ ನೈರೋಬಿಯಾಗೆ ವಲಸೆ ಹೋದ ಹಿಂದೂಗಳು ಇಂದು ಅಲ್ಲಿ ಹಿಂದೂ ಶಾಲೆ ಹಾಗೂ ಹಿಂದೂ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಮುಂದಾಗಿದ್ದಾರೆ ಮಾತ್ರವಲ್ಲದೆ ಹಸ್ತಪ್ರತಿಗಳನ್ನು ಸಂರಕ್ಷಿಸಲು ವಿಶೇಷ ವಿಭಾಗವನ್ನು ತೆರೆಯಲಿದ್ದಾರೆ. ಅವರ ಆದರ್ಶವನ್ನು ನಾವು ಪಾಲಿಸಿ ಭಾರತದ ಪ್ರಾಚೀನ ಹಸ್ತಪ್ರತಿಗಳನ್ನು ಸಂರಕ್ಷಿಸಬೇಕಾಗಿದೆ ಎಂದರು.

ವರ್ಷಕ್ಕೊಮ್ಮೆ ಮಾತ್ರ ಪೂಜೆಗಾಗಿ ತೆಗೆಯುವ ಪ್ರಾಚೀನ ತಾಳೆಗ್ರಂಥಗಳನ್ನು ಬಲ್ಲವರಿಗೆ ನೀಡಿ ಅದರಲ್ಲಿರುವ ವಿಷಯವನ್ನರಿಯಲು ಪ್ರಯತ್ನಪಡಬೇಕು. ಇದರಿಂದ ನಮ್ಮಲ್ಲಿ ಇತಿಹಾಸಪ್ರಜ್ಞೆ ಜಾಗೃತವಾಗುತ್ತದೆ ಎಂದು ಶಾಸಕ ಕೆ. ರಘುಪತಿ ಭಟ್ ತಿಳಿಸಿದರು. ಕಾಪು ಶಾಸಕ ಲಾಲಾಜಿ ಮೆಂಡನ್ ಹಸ್ತಪ್ರತಿ ಸಂರಕ್ಷಣೆ ಎಲ್ಲರ ಕರ್ತವ್ಯವಾಗಬೇಕೆಂದರು. ಮೈಸೂರು ವಿ. ವಿ. ಯ ನಾಗರಾಜ ಶರ್ಮ ಮಾತನಾಡಿ, ಹಸ್ತ ಪ್ರತಿಗಳು ಅತ್ಯಮೂಲ್ಯ ಸಾರ ಸಂಗ್ರಹವುಳ್ಳ ಮಹಾನ್ ಗ್ರಂಥಗಳಾಗಿದ್ದು ಅವುಗಳನ್ನು ಹೊಂದಿದವರು ತಮ್ಮ ಸಂಸ್ಥೆಯ ತಿಳುವಳಿಕೆಗೆ ತರಬೇಕೆಂದು ವಿನಂತಿಸಿದರು. ಪ್ರಾಚಾರ್ಯ ಬಿ. ಗೋಪಾಲ ಆಚಾರ್ಯ ಸ್ವಾಗತಿಸಿ ವಂದಿಸಿದರು.






ಭಾರತದ ಎಲ್ಲ ಭಾಷೆಗೂ ಸಂಸ್ಕೃತವೇ ಮೂಲ ಭಾಷೆ. ಇಂಗ್ಲೀಷ್ ಭಾಷೆ ಕೂಡಾ ಸಂಸ್ಕೃತದ ಪ್ರಭಾವಕ್ಕೆ ಒಳಗಾಗಿ ಅನೇಕ ಪದಗಳನ್ನು ತನ್ನದಾಗಿಸಿಕೊಂಡಿದೆ ಎಂದು ಪುತ್ತಿಗೆ ಶ್ರೀ ಸುಗುಣೇಂದ್ರ ತೀರ್ಥ ಶ್ರೀ ಪಾದರು ಹೇಳಿದ್ದಾರೆ. ಅವರು ಹಿರಿಯಡ್ಕ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಆಶ್ರಯದಲ್ಲಿ ರೂಪಿಸಿದ ಸಂಸ್ಕೃತ ಸಂಧ್ಯಾ ಕೇಂದ್ರವನ್ನು ತಾ. 10-7-2004ರ ಶನಿವಾರ ಉದ್ಘಾಟಿಸಿ, ಆಶೀರ್ವಚನ ನೀಡಿದರು. ಸಂಸ್ಕೃತ ಭಾಷೆ ಶ್ರೇಷ್ಠ ಭಾಷೆ ಮಾತ್ರವಲ್ಲ ಸುಲಲಿತವಾಗಿದೆ ಎಂದರು. ಹಿರಿಯಡಕ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಎಚ್. ಎಂ. ರತ್ನಾಕರ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಪುತ್ತಿಗೆ ವಿದ್ಯಾಪೀಠದ ಕುಲಸಚಿವ ಪ್ರಸನ್ನ ಆಚಾರ್ಯ, ಉಪನ್ಯಾಸಕ ಎಲ್. ಟಿ. ರಾಟಿಮನಿ ಉಪಸ್ಥಿತರಿದ್ದರು. ಸರಕಾರಿ ಪದವಿಪೂರ್ವ ಕಾಲೇಜಿನ ಅಧ್ಯಾಪಕ ಎಸ್. ಎಸ್. ಪೂಜಾರ್ ಸ್ವಾಗತಿಸಿದರು. ಶ್ರೀ ಪುತ್ತಿಗೆ ವಿದ್ಯಾಪೀಠದ ಪ್ರಾಂಶುಪಾಲ ಬಿ. ಗೋಪಾಲ ಆಚಾರ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಮುರಳೀಧರ ಹಾಲಂಬಿ ವಂದಿಸಿದರು. ಉಪನ್ಯಾಸಕ ರಂಗನಾಥ ಭಟ್ ಕಾರ್ಯಕ್ರಮ ನಿರೂಪಿಸಿದರು.

*With Best Compliments From :*

**The Gajanana Motor Transport Company Ltd.**

**Regd. Office : Sagar, Shimoga Dist.**

**Adm. Office : UDUPI DIST.**

### ಅಧ್ಯಯನಕ್ಕೊಳಗಾಗಲಿರುವ

# ಲಾಲೂ ಲೀಲಾ ಜಾಲಗಳು

ಹುಲ್ಲಿನ ಮಾಡಿನಂತಿರುವ ಕೇಶ ವಿನ್ಯಾಸವುಳ್ಳ, ಹಳ್ಳಿಗರಿಗೆ ಹೋಲುವಂತೆ ಸದಾ ಸತಾಂಬೂಲವಾಗಿ ಮೆಲ್ಲುವ ಹಲ್ಲುಗಳುಳ್ಳ ರೈಲು ಮಂತ್ರಿ ಲಾಲೂ ಅವರು ಬಣ್ಣ ಬಣ್ಣದ ರಾಜಕೀಯದಲ್ಲಿ ಬಲು ಅಪರೂಪದ ಲೀಲಾವತಾರರೇ?

ಅಥವಾ 'ಸೋನಿಯಾ ವಿರೋಧಕ್ಕೆ ಜಡೆಗಳು ಕಾರಣ' ಎಂಬಿತ್ಯಾದಿಯಾಗಿ ಲೀಲಾ ಜಾಲವಾಗಿ ಲಲನೆಯರನ್ನು ಛೇಡಿಸುವ ಮತ್ತು ಅದರ ಸಲುವಾಗಿಯೇ ಎನ್ನುವಂತೆ ಪ್ರಮುಖ ಲಲನಾದ್ವಯರಿಂದ ತಲೆ ಬೋಳಿಸಲ್ಪಡುವ ಶಪಥವನ್ನು ಹಾಕಿಸಿಕೊಂಡ, ಸದಾ ಡೋಲು ಬಾರಿಸುವುದರ ಜೊತೆಗೆ ಡೊಂಬರಾಟವಾಡುವ ತನ್ನ ಪಟ್ಟದರಸಿಯನ್ನು ಪಟ್ಟಕ್ಕೇರಿಸಿದ, ನಿರಂತರ ತ್ರಿಪಂಚಕ ವರ್ಷಗಳಿಂದ ಅನಭಿಷಿಕ್ತ ದೊರೆಯಂತೆ ಮೆರೆಯುವ, ತಿಂದರೂ ತಿನ್ನದಂತಿರುವ, ಮೇದರೂ ಮೇಯದಂತಿರುವ, ಉಂಡರೂ ಉಣ್ಣದಂತಿರುವ, ಕಳಂಕಿತನೆನಿಸಿದರೂ ಅಕಳಂಕ ಚರಿತನಂತಿರುವ, ಹಾಸ್ಯ ದೇವತೆಯಂತಿದ್ದರೂ ಉಗ್ರ ಪ್ರತಾಪಿಯಂತಿರುವ ಜನಪ್ರಿಯ ಲಾಲೂ ಪ್ರಸಾದ್, ರಾಜಕೀಯದಲ್ಲಿ ಕಪಟನಾಟಕ ಸೂತ್ರಧಾರರೇ?

ಅಥವಾ ಪುಂಗಿಯ ಹಾಡು ಹಾಡಿ ಹಾವನ್ನು ಆಡಿಸುವ ಹಾವಾಡಿಗರೇ? ಅಥವಾ 'ಪಾಪ್' ಸಂಗೀತದಂತೆ ಪಾಕಿಸ್ತಾನದಲ್ಲೂ ಪಾಪ್ಯುಲರ್ ಆದ ಪ್ರಸಾದ್ ಅವರು ಮೋಡಿ ಮಾಡುವ ಪವಾಡ ಪುರುಷರೇ?

ಅಥವಾ ಗೋಪಾಲಕರ ಜೊತೆಗೆ ಸದಾ ಲಗೋರಿ ಆಡುವ ಇವರು ಯಾದವ ವಂಶದ ಗೋಪಾಲ ಮಾಧವನ ಮೋದದ ಪ್ರಸಾದರೇ? ಗೋಕುಲಕ್ಕೆ ಹಾಲು ಕೊಡಲೋಸುಗ, ಮೇವು ತಿಂದ ಗೊಲ್ಲರ ವಲ್ಲಭನೇ? ಅಥವಾ ವಸುದೇವನ ಸುತ ವಾಸುದೇವನನ್ನು ವಿಡಂಬಿಸುವ ಸೃಗಾಲ ವಾಸುದೇವನೇ?

ಅಥವಾ ಮಣ್ಣಿನ ಮಡಕೆಯನ್ನು ಮರಳಿ ತಂದು ಬಡವರ ಕೈಗಳಿಗೆ ಉದ್ಯೋಗ ನೀಡಿ ಗ್ರಾಮಾಭಿವೃದ್ಧಿಯ ಮಾದರಿ ತೋರಿಸಿದ ಅಭಿನವ ಗಾಂಧಿಯೇ?

ದೇಶ ವಿದೇಶಗಳ ವಿಮರ್ಶಕರು ಲಾಲೂ ಅಧ್ಯಯನಕ್ಕೆ ಉತ್ಸುಕರಾಗಿದ್ದಾರಂತೆ. ಅಧ್ಯಯನ ಪೀಠ ಸ್ಥಾಪಿಸುತ್ತಾರಂತೆ. ಹಣ ಬಿಡುಗಡೆ ಮಾಡುತ್ತಾರಂತೆ, ಆಳವಾಗಿ ಪರೀಕ್ಷಿಸಿ ಅಧ್ಯಯನ ಮಾಡುತ್ತಾರಂತೆ! ಸಂತೋಷದ ಸುದ್ದಿ! ಪತ್ರಿಕಾ ಸುದ್ದಿ.

ಹಾಗಿದ್ದರೆ ಮಗಧಾದಿಪತಿಯ ಮಂಪರು ಪರೀಕ್ಷೆಯನ್ನೂ ಅವರು ಮಾಡುತ್ತಾರೆಯಾ?

**- ಸುಶ್ರೀ**

# ಶ್ರೇಯಃ ಪ್ರಾರ್ಥನಾ



ಸುಗುಣಮಾಲಾ ಅಭಿಮಾನಿಗಳೂ, ಲೇಖಕರೂ, ನಮ್ಮ ಸಂಸ್ಥಾನದ ಹಿತೈಷಿಗಳೂ ಮತ್ತು ಸಮಾಜದ ಹಿತಚಿಂತಕರೂ ಆದ ಡಾ। ಶ್ರೀಯುತ ಮುರಾರಿ ಬಲ್ಲಾಳ್ ಅವರು ಇತ್ತೀಚೆಗೆ ಅನಿರೀಕ್ಷಿತವಾಗಿ ಅಸ್ತಂಗತರಾದದ್ದು ನಮಗೆ ಅತ್ಯಂತ ಆಘಾತವಾಗಿದೆ, ಆತಂಕವಾಗಿದೆ.

ಇತ್ತೀಚೆಗೆ ತಾನೇ ನಮ್ಮ ಸಂದೇಶಗಳ ಸಾರವನ್ನು ಸೆರೆಹಿಡಿದು ಲಂಕೇಶ್ ಪತ್ರಿಕೆ, ಉದಯವಾಣಿ ಮೊದಲಾದ ಪತ್ರಿಕೆಗಳಲ್ಲಿ ಮನೋಜ್ಞವಾಗಿ ಪ್ರಕಟಿಸಿದ ಶ್ರೀಯುತ ಬಲ್ಲಾಳರ ತೀವ್ರವಾದ ಸಾಮಾಜಿಕ ಕಾಳಜಿ, ಕಳಕಳಿ, ಸ್ಪಂದನೆ ಮತ್ತು ಹರಿತವಾದ, ವಸ್ತುನಿಷ್ಠವಾದ ವಿಮರ್ಶೆ ಮತ್ತು ಸದಾ ಕ್ರಿಯಾಶಾಲಿತ್ವ ನಿಜವಾಗಿಯೂ ನಮಗೆ ಅಂತರಂಗೀಕೃತವಾಗಿದ್ದು ಸಮಸ್ತ ಚಿಂತಕರಿಗೆ ಅದು ಮೇಲ್ಪಂಕ್ತಿಯಾಗಿದೆಯೆಂದು ಭಾವಿಸುತ್ತೇವೆ.

ಕೆಲವೇ ದಿನಗಳ ಹಿಂದೆ ಬಿಡುಗಡೆಯಾಗಲಿರುವ ಸಾಂಸ್ಕೃತಿಕ ವಿಮರ್ಶೆಯ ತಮ್ಮ ಗ್ರಂಥವನ್ನು ನಮ್ಮ ಕೈಗೆ ನೀಡಿದ್ದ, ಮೂಲತಃ ತಾನು ಪರಮ ಆಸ್ತಿಕನೆಂದು ಹೆಮ್ಮೆ ವ್ಯಕ್ತಪಡಿಸಿದ್ದ ಬಲ್ಲಾಳರು ತಮ್ಮ ಹೊತ್ತಗೆಯ ಮುಖಾಂತರ ಆಸ್ತಿತ್ವವನ್ನು ಚಿರಸ್ಥಾಯಿಯಾಗಿಸಿದ್ದಾರೆ. ರಥಬೀದಿಯ ಸಹೃದಯ ಚಿಂತಕರ ಜೊತೆಗೆ ವಿರಹವಿಲ್ಲದ ಬರಹದ ಬಾಂಧವ್ಯವನ್ನು ಕಳಚದಂತೆ ಬೆಸೆದಿದ್ದಾರೆಂದು ಭಾವಿಸುತ್ತೇವೆ.

ಬಲ್ಲಾಳರ ಚಿಂತನಶೀಲತೆ ಸಮಾಜದಲ್ಲಿ ಚಿರಂತನವಾಗಲಿ ಅವರ ಚೇತನಕ್ಕೆ ಚಿರಶಾಂತಿ ಸಿಗಲಿ.

**ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು**
**ಶ್ರೀಪುತ್ತಿಗೆ ಮಠ, ರಥಬೀದಿ, ಉಡುಪಿ**



# ಓಲೆಭಾಗ್ಯ

ಹಳೇ ಕಾಲದ ಓಲೆಗರಿ ಹಸ್ತಪ್ರತಿಗಳು ಒಲೆಗೆ ಗುರಿಯಾಗುತ್ತಿವೆಯೇ? ಹಾಗಂತ ಗುಮಾನಿಯಾಗುತ್ತಿದೆ.

ಭಾರತೀಯರಲ್ಲಿ ಸಾಧನೆಗಳಿವೆ. ದಾಖಲೆಗಳಿಲ್ಲ. ಹಾಗೆ ನೋಡಿದರೆ ಇತರರಲ್ಲಿ ಸಾಧನೆಗಳಿಗಿಂತ ದಾಖಲೆಗಳೇ ಹೆಚ್ಚು. ಹಾಗಾಗಿ ಸಾಧನೆಗಳು ಅತಿಯಾಗಿ ಕಾಣಿಸುತ್ತವೆ. ಈ ದೃಷ್ಟಿಯಲ್ಲಿ ನೋಡಿದರೆ ದಾಖಲಿಸಿಡುವುದು ಕೂಡ ಒಂದು ದೊಡ್ಡ ಸಾಧನೆಯೇ. ಮಹಾಸಾಧನೆಯೇ.

ಭಾರತೀಯರಲ್ಲಿ ಇಂದು ಇದ್ದುಬಿದ್ದು ಇರುವ ದಾಖಲೆಗಳೂ, ಗ್ರಂಥಗಳೂ ಸುರಕ್ಷಿತವಾಗಿಲ್ಲ. ಸುರಕ್ಷಿತತೆಯ ಉದ್ದೇಶವೂ ಅಷ್ಟೇನಿಲ್ಲ. ಹಾಗೆ ನೋಡಿದರೆ ಈ ಮನಃಸ್ಥಿತಿ ಭಾರತೀಯರಲ್ಲಿ ಲಾಗಾಯ್ತಿನಿಂದ ರಕ್ತದಲ್ಲೆ ಬಂದಿದೆಯಲ್ಲವೇ? ಆನುವಂಶಿಕವಾಗಿದೆಯಲ್ಲವೇ?

ಮಹಾಭಾರತತಾತ್ಪರ್ಯನಿರ್ಣಯದ ಪ್ರಸ್ತಾವನೆಯಲ್ಲಿ ಶ್ರೀಮದಾನಂದತೀರ್ಥ ಭಗವತ್ಪಾದರ ಪ್ರಾಸ್ತಾವಿಕ ಮಾತು ಇದಕ್ಕೆ ಹಿಡಿದ ಕೈಗನ್ನಡಿ. ಆ ಕಾಲದಲ್ಲಿ ಆಚಾರ್ಯರು ಅಂದರು.

ಕ್ವಚಿತ್ ಗ್ರಂಥಾನ್ ಪ್ರಕ್ಷಿಪಂತಿ ಕ್ವಚಿದಂತರಿತಾನಪಿ ।

ಕುರ್ಯುಃ ಕ್ವಚಿಚ್ಚ ವ್ಯತ್ಯಾಸಂ... ॥ ಇತ್ಯಾದಿ ಇತ್ಯಾದಿ.

ಮಂದಿ ಗ್ರಂಥಗಳನ್ನು ಯಾವ ರೀತಿ ನೋಡುತ್ತಾರೆಂದರೆ ನೀವು ಎಷ್ಟು ಕೆಟ್ಟದಾಗಿ ಗ್ರಂಥಗಳ ಜೊತೆಗೆ ವ್ಯವಹರಿಸಬಹುದೆಂದು ಊಹಿಸುತ್ತೀರೋ ಅದೆಲ್ಲವನ್ನೂ ಮೀರಿ ಅವರು ಗ್ರಂಥಗಳ ಜೊತೆಗೆ ವ್ಯವಹಾರ ಮಾಡಿಯಾಗಿರುತ್ತದೆ ಎನ್ನುವಷ್ಟು. ಎಷ್ಟರತನಕವೆಂದರೆ ಓಲೆಗರಿಗಳನ್ನು ಒಲೆಗೆ ತೂರಿ, ಬಿಸಿನೀರು ಕಾಸಿ ಮಿಂದು ಬಿಡುವುದೂ ಉಂಟು.

ಆಗ, ಎಂಟು ನೂರು ವರ್ಷಗಳ ಹಿಂದೆ ಕೋಟ್ಯಂಶೋಪಿ ನ ವರ್ತತೇ ಎಂದು ಕೋಟಿಗ್ರಂಥಗಳಲ್ಲಿ ಒಂದೂ ಸಾಬೀತಾಗಿ ಉಳಿದಿಲ್ಲ ಎಂದು ಶ್ರೀಮದಾಚಾರ್ಯರು ಮರುಗಿದರು. ಹಾಗಿದ್ದರೆ ಈಗ ಹೇಗೆ? ಗ್ರಂಥಗಳ ಸ್ಥಿತಿಯೇ ಹೀಗಾದರೆ ಇನ್ನು ಕಿಮ್ವರ್ಥೋ ದೇವ ದುರ್ಗಮಃ ಎಂದು ಇನ್ನು ಗ್ರಂಥಾರ್ಥಗಳು ವಿಲುಳಿತವಾಗದೆ ಉಳಿಯುವುದು ಎಂತು?

ಕೊನೇಗೆ ಓಲೆಗಳು, ಒಂದೋ ಆರಾಧ್ಯವಸ್ತುವಾಗಿ ದೇವರ ಪೀಠಕ್ಕೆ ಏರುತ್ತವೆ. ಅಥವಾ ಒಲೆಗೆ ತಳ್ಳಲ್ಪಡುತ್ತವೆ. ಅಂತೂ ಗ್ರಂಥಗಳು ಜ್ಞಾನ ವಾಹಕಗಳಾಗಿ ಉಳಿದು ಬಿಡುವುದು ಇಲ್ಲದ ಮಾತು. ಗ್ರಂಥಗಳು, ಕುಂಚಗಳು ದೈವವಶಾತ್ ಉಳಿದರೆ ಕೊನೇಗೆ ಆ್ಯಂಟಿಕ್ ಆಗಿ ವಿದೇಶೀಯ ವಸ್ತು ಸಂಗ್ರಹಾಲಯದಲ್ಲೋ ಅಥವಾ ವಿದೇಶೀ ವಾಚನಾಲಯದಲ್ಲೋ ಅಥವಾ ಹೋಟೇಲ್ ಅಂಗಡಿಗಳ ಸ್ವಾಗತಾಲಯದಲ್ಲೋ ರಾರಾಜಿಸುತ್ತವೆ.

ಇದೀಗ ಸ್ವತಃ ಕೈಯಲ್ಲಿ ಊಟ ಮಾಡುವುದು ಕ್ರಮೇಣ ದೊಡ್ಡ ಸಂಗತಿಯಾಗಿ ಮಾರ್ಪಡುತ್ತಿರುವಂತೆ, ಮುಂದೆ ಪಾಮ್ ಯುಗ ದಲ್ಲಿ ಕೈಯಲ್ಲಿ ಸ್ವತಃ ಬರೆಯುವುದು ಕೂಡ ಆಶ್ಚರ್ಯದ ವಿಷಯವಾಗಿ, ಕೈಯಲ್ಲಿ ಬರೆಯುವವರು ಕಲಾಕಾರರಾಗಿ, ಹಸ್ತಕಲಾ ಕೇಸರಿಗಳಾಗಿ ಪರಿಣಮಿಸಿದರೆ ಆಶ್ಚರ್ಯ ಪಡಬೇಕಾದದ್ದೇನಿಲ್ಲ. ಈಗ ಕೊಂಚವಾದರೂ ಕಂಠಿಯಲ್ಲಿ ಕುಂಚದಲ್ಲಿ ಬರೆಯುವವರು ಸಿಕ್ಕಿದರೆ ಅವರು ಕಲಾಕಾರರಾಗಿ ಪರಿಗಣಿತರಾಗುವಂತೆ ಆಕರ್ಷಕರಾಗಿ ಕಾಣುವಂತೆ ಮುಂದೆ ಭವಿಷ್ಯೋತ್ತರದಲ್ಲಿ ಹಸ್ತಪ್ರತಿಗಳ ತೂಕ ಇನ್ನಷ್ಟು ಹೆಚ್ಚುತ್ತದೆ.

ಪ್ರಾಚೀನ ಹಸ್ತಪ್ರತಿಗಳು ರಾಷ್ಟ್ರೀಯ ಸಂಪತ್ತು. ಆ ಬಗ್ಗೆ ನಾವೆಲ್ಲಾ ಜಾಗೃತರಾಗಿರಬೇಕು. ಈ ನಿಟ್ಟಿನಲ್ಲಿ ಸರಕಾರೀಯ ಹಸ್ತಪ್ರತಿ ಸಂರಕ್ಷಣಾ ಯೋಜನೆಯನ್ನು ನಾವೆಲ್ಲಾ ಅಭಿನಂದಿಸಬೇಕು. ಪ್ರತಿಸ್ಪಂದಿಸಬೇಕು. ಪ್ರೋತ್ಸಾಹಿಸಬೇಕು. ಹಸ್ತಪ್ರತಿ ರಕ್ಷಣೆಗೆ ಪ್ರತಿಹಸ್ತಗಳೂ

ಸಿದ್ಧಹಸ್ತಗಳಾಗಬೇಕು.

ಒಲೆಗರಿಗಳು ಭಾರತ ಮಾತೆಯ ಓಲೆ ಭಾಗ್ಯಗಳು. ಜ್ಞಾನದ ಕಿರೀಟಕ್ಕೊಂದು ಗರಿಮೆಯ ಗರಿಗಳು. ತುರಾಯಿಗಳು. ಅವುಗಳು ಗರಿಗೆದರಿದರೆ ರಾಷ್ಟ್ರದ ಕೀರ್ತಿ ಗಿರಿಗೇರುತ್ತದೆ.

ಆದ್ದರಿಂದ ಅವುಗಳು ಒಲೆಗಳಿಗೆ ಗುರಿಯಾಗದೆ, ಉರಿಯಾಗದೆ ಒಲೆಗೆ ಸರಿಯದೆ ಕಿವಿಯ ಸುತ್ತೋಲೆಗಳಾಗಬೇಕು. ನಿಮ್ಮ ಮನೆಗಳಲ್ಲಿ ಓಲೆಗಳಿದ್ದರೆ ತಡಮಾಡದೆ ನಮ್ಮ ಶ್ರೀಮಠಕ್ಕೆ ತಲುಪಿಸಬೇಕು. ಅವುಗಳಲ್ಲಿರುವ ಅಮೂಲ್ಯ ಜ್ಞಾನಗಳು ಭವಿಷ್ಯತ್ತಿಗೆ ಬೆಳಕಾಗುವಂತಾಗಬೇಕು.

ಯಾಕೆಂದರೆ ಭೂತಾರಾಧನೆ ಉಜ್ವಲ ಭವಿಷ್ಯೋದಯದ ಮೊಟ್ಟ ಮೊದಲ ಮೆಟ್ಟಿಲು ತಾನೇ?

ಉಡುಪಿ ಸಮೀಪದ ಹಿರಿಯಡ್ಕದ ಪುತ್ತಿಗೆ ಗ್ರಾಮದ ಶ್ರೀ ಪುತ್ತಿಗೆ ಮಠದಲ್ಲಿ
ಶ್ರೀ ಪುತ್ತಿಗೆ ವಿದ್ಯಾಪೀಠ ಮತ್ತು ರಾಷ್ಟ್ರೀಯ ಸಂಸ್ಕೃತ ಪ್ರತಿಷ್ಠಾನ ಆಯೋಜಿಸಿದ
ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯದವರು
ನಡೆಸಿದ ಹಸ್ತಪ್ರತಿ ಸಂರಕ್ಷಣಾ ಕಾರ್ಯಾಗಾರದಲ್ಲಿ ಸಮಾರೋಪ ಸಂದೇಶದ
ಜೊತೆಗೆ

**ಉಡುಪಿ ಶ್ರೀ ಸೋದೆ ಮಠದ ಶ್ರೀ ಶ್ರೀ ವಿಶ್ವೋತ್ತಮ ತೀರ್ಥರು ಸಂಗ್ರಹಿಸಿದ 500 ವರ್ಷ ಹಳೆಯದಾದ ಶ್ರೀಪುತ್ತಿಗೆ ಮಠಾಧೀಶ ಶ್ರೀ ಶ್ರೀನಿಧಿ ತೀರ್ಥರಿಂದ ವಿರಚಿತವಾದ ಹಸ್ತಪ್ರತಿ ಗ್ರಂಥ ಶ್ರೀ ಮನ್ನ್ಯಾಯ ಸುಧಾ ಶ್ರೀನಿಧಿ ವ್ಯಾಖ್ಯಾನದ ಪೂರ್ಣಾನುವಾದಕ್ಕಾಗಿ ಹಸ್ತಪ್ರತಿ ಸಂಶೋಧನಾಲಯಕ್ಕೆ ಹಸ್ತಾಂತರಿಸುವ ಸಂದರ್ಭದಲ್ಲಿ**

**ಶ್ರೀ ಶ್ರೀ ಸುಗುಣೇಂದ್ರತೀರ್ಥರು**

ನೀಡಿದ ಸಂದೇಶದ ಸಾರ ಸಂಗ್ರಹ



# ಸುಗುಣಾಂತರಂಗ

ಸಂಪುಟ : 19 ಸಿಂಹ ಮಾಸ ಸಂಚಿಕೆ : 8 ಆಗಸ್ಟ್ 2004

## ಸುಗುಣ ಬಳಗ

**ಸಂಸ್ಥಾಪಕರು :**
ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು
**ನಿರ್ದೇಶಕ** : ಬನ್ನಂಜೆ ಗೋವಿಂದಾಚಾರ್ಯ
**ಸಂಪಾದಕ** : ಎಂ. ರಾಧಾಕೃಷ್ಣರಾವ್
**ಪ್ರಕಾಶಕ** : ಪ್ರಸನ್ನಾಚಾರ್ಯ
**ಮುದ್ರಕ** : ಬಿ.ಜಿ. ಸುಬ್ಬರಾವ್

**ಸಲಹಾ ಮಂಡಳಿ**
ಬನ್ನಂಜೆ ರಾಮಾಚಾರ್ಯ
ಮಳಗಿ ಜಯತೀರ್ಥಾಚಾರ್ಯ
ಡಾ। ಯು. ಪಿ. ಉಪಾಧ್ಯಾಯ
ಬಿಂದು ಮಾಧವಾಚಾರ್ಯ ನಾಗಸಂಪಿಗೆ
ಸಗ್ರಿ ರಾಘವೇಂದ್ರ ಉಪಾಧ್ಯಾಯ
ಡಾ। ಎನ್. ವೆಂಕಟೇಶ ರಾವ್
ಚಿಪ್ಪಗಿರಿ ನಾಗೇಂದ್ರಾಚಾರ್ಯ
ಗಂಜೀಫಾ ರಘುಪತಿ ಭಟ್
ಕಡೆಕಾರು ಶ್ರೀಶ ಭಟ್
ಉಡುಪಿ ರಾಮನಾಥಾಚಾರ್ಯ
ಬಿ.ಜಿ. ರವಿಕುಮಾರ್

**ಸಂಪರ್ಕವಿಳಾಸ :**
ಸಂಚಾಲಕ, ಸುಗುಣಮಾಲಾ ಮಾಸಪತ್ರಿಕೆ
ರಥಬೀದಿ, ಉಡುಪಿ - 576 101, ಉಡುಪಿ ಜಿಲ್ಲೆ, ಕರ್ನಾಟಕ
ದೂರವಾಣಿ : **(0820) 2522222, 2531047**
Tel Fax : 0820-2521272
E-Mail:mprasannaacharya@yahoo.com
Website:http://WWW.shreeputhige.org

**ಚಂದಾವಿವರ**
**ವಾರ್ಷಿಕ: ರೂ. 80/- 15 ವರ್ಷ ರೂ. 1000/-**
**ಜಾಹೀರಾತು ವಿವರ :**
ಅರ್ಧ ಪುಟಕ್ಕೆ ರೂ. **750/-** ಒಂದು ಪುಟಕ್ಕೆ ರೂ. **1500/-**

**ಮುಖಪುಟ : ವೇದವ್ಯಾಸ**

**ಕೃಪೆ : ಶ್ರೀ ಪುತ್ತಿಗೆ ಮಠ**

**ಮರ್ಮಮೀಮಾಂಸೆ** 5
ಸುಶ್ರೀ

**ಮುಖಪುಟ ಲೇಖನ** 7

**ಶ್ರೀ ಸುಧಾ ಸುವಚನ** ಲೇಖಾಂಕ - 29 41
ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು.

**ಪುತ್ತಿಗೆ ಶ್ರೀಗಳು ಆಸ್ತಿಕರಿಗೆ ನೀಡಿದ ಅಪೂರ್ವ ಕೊಡುಗೆ - ಶ್ರೀ ಗೋವರ್ಧನ ಮಂದಿರ** 10
ಡಾ। ಕೆ. ಪಿ. ಪುತ್ತೂರಾಯ

**ಯಕ್ಷಪ್ರಶ್ನೆ - 30** 13
ಅರವಿಂದ ದೇಶಪಾಂಡೆ, ಬೆಳಗಾಂ

**ಏಳು ಏನೆಂದು ಹೇಳು - ೨** 18
ಉಡುಪಿ ಅಷ್ಟಾವಧಾನಿ

**ನಮ್ಮ ಆಯುಷ್ಯ** 22
ಡಾ। ಎಚ್. ವಿ. ನರಸಿಂಹ ಮೂರ್ತಿ

**ಮಾಡಿ ಮಾಡಿಸುವ ಪ್ರಕ್ರಿಯೆ** 28
ಸಗ್ರಿ ರಾಘವೇಂದ್ರ ಉಪಾಧ್ಯಾಯ

**ಮಾಧ್ವರು - ತೌಳವರು** 32
ಎ. ಬಿ. ಕುಂಜಾರ್, ಬೆಂಗಳೂರು

**ಏಕಾದಶಿ ಮಹಿಮೆ** 36
ಅಚಿಂಜ್ಯೋ

## 2004 ಸೆಪ್ಟಂಬರ್ ತಿಂಗಳ ವಿಶೇಷಗಳು

| | |
|---|---|
| 2 ಸಂಕಷ್ಟ ಚತುರ್ಥಿ ಚಂ. ಉ. ಘಂ. 9-05 | 6 ಶ್ರೀಕೃಷ್ಣ ಜಯಂತೀ ಚಂ. ಉ. ಘಂ. 12.04 |
| 7 ಶ್ರೀಕೃಷ್ಣ ಲೀಲೋತ್ಸವ | 10 ಸರ್ವೈಕಾದಶೀ |
| 14 ಅಮಾವಾಸ್ಯಾ, ನರಹರಿಪರ್ವತ ಜಾತ್ರೆ | 16 ಕನ್ಯಾ ಸಂಕ್ರಮಣ |
| 18 ಶ್ರೀ ಗಣೇಶ ಚತುರ್ಥಿ | 24 ಸರ್ವೈಕಾದಶೀ |
| 27 ಅನಂತಚತುರ್ದಶೀ | 28 ಪೂರ್ಣಿಮಾ |

ಮುಖಪುಟ ಲೇಖನ

# ವ್ಯಾಂ ವೇದವ್ಯಾಸಾಯ ನಮಃ

- ಬಿಂದು ಮಾಧವ, ನಾಗಸಂಪಿಗೆ , ಬಾಗಲಕೋಟೆ

**ಜಯತ್ಯಜೋಽಖಂಡಗುಣೋರುಮಂಡಲಃ**

**ಸದೋದಿತೋ ಜ್ಞಾನ ಮರೀಚಿ ಮಾಲೀ ।**

**ಸ್ವಭಕ್ತಹಾರ್ದೋಚ್ಚತಮೋ ನಿಹಂತಾ**

**ವ್ಯಾಸವತಾರೋ ಹರಿರಾತ್ಮ ಭಾಸ್ಕರಃ ॥**

ಸಾಕ್ಷಾತ್ ಶ್ರೀಹರಿಯೇ ಶ್ರೀ ವೇದವ್ಯಾಸರು. ಸರ್ವೋತ್ಕೃಷ್ಟರಾದ ಅವರು ಭಾಸ್ಕರನಿಗಿಂತಲೂ ಸಾವಿರಾರು ಪಟ್ಟು ಎತ್ತರದಲ್ಲಿರುವವರು. ಆದರೂ ಭಾಸ್ಕರನ ಹೋಲಿಕೆಯಿಂದ ಊಹಿಸಿಕೊಳ್ಳಬಹುದಾದ ವ್ಯಕ್ತಿತ್ವ ಅವರದ್ದು.

ಸೃಷ್ಟಿಯ ಆದಿಯಲ್ಲಿ ಜನನಕ್ಕೊಳಗಾಗುವವನು ಭಾಸ್ಕರ. ಆದರೆ ಶ್ರೀ ವೇದವ್ಯಾಸರು ಎಂದೆಂದೂ ಜನಿಸದವರು. ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವ ಅವತಾರವೇ ಅವರ ಪಾಲಿನ ಜನನ. ಜೀವಾತ್ಮರಂತೆ ನೂತನ ದೇಹದ ಸಂಪರ್ಕಕ್ಕೊಳಗಾಗಿರುವ ಜನ್ಮ ಅವರಿಗಿಲ್ಲ.

ಭಾಸ್ಕರನಿಗೆ ತೇಜೋಮಂಡಲವಿದೆ. ಆದರೆ ಆ ತೇಜಸ್ಸು ಜಡ. ಶ್ರೀ ವೇದವ್ಯಾಸರಾದರೂ ಗುಣಗಳ ಉತ್ಕೃಷ್ಟವಾದ ಮಂಡಲವುಳ್ಳವರು. ಆ ಗುಣಗಳು ಯಾವುದೇ ಬಗೆಯ ನಾಶಕ್ಕೊಳಗಾಗದವು. ಭಾಸ್ಕರ ಪ್ರತಿನಿತ್ಯ ಬೆಳಿಗ್ಗೆ ಉದಯಿಸುವನು. ಸಂಜೆ ಅಸ್ತಮಿಸುವನು. ಶ್ರೀ ವೇದವ್ಯಾಸರು ಎಂದೆಂದೂ ಉದಯಿಸಿರುವವರು.

ಭಾಸ್ಕರ ಕಿರಣ ಸಮುದಾಯ ಉಳ್ಳವನು. ಅವು ಜಡಬೆಳಕಿನ ಕಿರಣಗಳು. ಶ್ರೀವೇದವ್ಯಾಸರಾದರೂ ಚಿನ್ಮಯ ಕಿರಣಗಳ ಸಮೂಹವುಳ್ಳವರು.

ಭಾಸ್ಕರ ಹೊರಗಿನ ಕತ್ತಲನ್ನು ಒಂದು ಹಂತದಲ್ಲಷ್ಟೇ ಹೋಗಲಾಡಿಸುವವನು. ಶ್ರೀ ವೇದವ್ಯಾಸರಾದರೂ ತಮ್ಮ ಭಕ್ತರ ಹೃದಯದೊಳಗಿನ ಗಾಢತಮಸ್ಸನ್ನೂ ಅನಾದಿಯಾದ ಅಜ್ಞಾನವನ್ನು ಬುಡಸಹಿತವಾಗಿ ಕಿತ್ತೆಸೆಯುವವರು.

ಭಾಸ್ಕರ ಹೊರ ಪ್ರಪಂಚದ ಮೇಲೆ ಬೆಳಕು ಚೆಲ್ಲುವವನು. ಶ್ರೀ ವೇದವ್ಯಾಸರಾದರೂ ಉಪದೇಶ, ಗ್ರಂಥರಚನೆ ಮುಂತಾದವುಗಳ ಮೂಲಕ ತನ್ನ ಸ್ವರೂಪವಾದ ಆತ್ಮತತ್ವದ ಮೇಲೆ ಬೆಳಕು ಚೆಲ್ಲುವವರು.

ಶ್ರೀ ವೇದವ್ಯಾಸರ ಆತ್ಮೀಯ ಶಿಷ್ಯರಾದ ಶ್ರೀ ಮಧ್ವಾಚಾರ್ಯರು ತಮ್ಮ ನೆಚ್ಚಿನ ಗುರುಗಳನ್ನು ಕಂಡ ಬಗೆ ಇದು.

## ಧ್ಯಾನ ಶ್ಲೋಕ

**ಧ್ಯಾಯೇಚ್ಚಶಾಂಕಶತಕೋಟಿ ಪ್ರಸೌಖ್ಯಕಾಂತಿಂ**

**ಸಂಸಿಚ್ಯಮಾನಮಮೃತೋರು ಘಟೈಃ ಸುರೇಶೈಃ ।**

**ವರ್ಣಾಭಿಮಾನಿಭಿರಜೇಶ ಮುಖ್ಯೈಃ ಸಹೈವ**

**ಪಂಚಾಶತಾ ಪ್ರತಿಗಿರಂತಮಶೇಷವಿದ್ಯಾಃ॥**

ಅನಂತ ಕೋಟಿ ಚಂದ್ರರ ಬೆಳದಿಂಗಳಿಗಿಂತಲೂ ಮಧುರವಾದ ಆಹ್ಲಾದಕವಾದ ಕಾಂತಿಯುಳ್ಳ, ವರ್ಣಾಭಿಮಾನಿಗಳಾದ ಬ್ರಹ್ಮರುದ್ರಾದಿದೇವತೆಗಳು ಸುರಿಯುತ್ತಿರುವ ಪೂರ್ಣಕಲಶದ ಅಮೃತದಿಂದ ಆಪ್ಲಾವಿತವಾದ ಅಜಾದಿ ಪಂಚಾಶದ್ವರ್ಣರೂಪಗಳ ಜತೆಗೆ ಸಕಲ ವಿದ್ಯೆಗಳನ್ನೂ ಬ್ರಹ್ಮಾದಿಗಳಿಗೆ ಉಪದೇಶಿಸುತ್ತಿರುವ ವ್ಯಾಸರೂಪವನ್ನು ಧ್ಯಾನಿಸೋಣ.

ಮೊದಲು 'ವ್ಯಾಂ' ಎಂಬ ಬೀಜಾಕ್ಷರ ಅನಂತರ 'ವೇದ' ಪದದಿಂದ ಕೂಡಿದ ವ್ಯಾಸ ಪದ. ಆಮೇಲೆ 'ನಮಃ' ಶಬ್ದ. ಇದು ಎಂಟು ಅಕ್ಷರಗಳುಳ್ಳ ವ್ಯಾಸ ಮಂತ್ರ. ವ್ಯಾಂ ವೇದವ್ಯಾಸಾಯ ನಮಃ ಎಂದು. ಇದು ಜ್ಞಾನ ಭಾಸ್ಕರನೆನಿಸಿದ ವೇದವ್ಯಾಸರಿಗೆ ಪ್ರಿಯವಾದ ಮಂತ್ರ. ಯುದ್ಧದಲ್ಲಿ ನರಸಿಂಹಮಂತ್ರವು ಜಯಪ್ರದವಾಗಿರುವಂತೆ ವಾಗ್ಯುದ್ಧದಲ್ಲಿ ಶ್ರೀ ವೇದವ್ಯಾಸ ಮಂತ್ರವು ಜಯಪ್ರದವಾಗಿದೆ.

## ಶ್ರೀವೇದವ್ಯಾಸ ಗಾಯತ್ರಿಃ

**ಪೂರ್ಣಜ್ಞಾನಾಯ ವಿದ್ಮಹೇ ಪೂರ್ಣಾನಂದಾಯ ಧೀಮಹಿ ।**

**ತನ್ನೋ ವ್ಯಾಸಃ ಪ್ರಚೋದಯಾತ್ ॥**